## ಪರಿವಿಡಿ


| ಕ್ರ. ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1 | ಅಧ್ಯಕ್ಷರ ನುಡಿ | 1-3 |
| 2 | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಕರ್ತವ್ಯ ಮತ್ತು ಜವಾಬ್ದಾರಿಗಳು | 4-6 |
| 3 | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧಿಕಾರಿ ಸಿಬ್ಬಂದಿಗಳ ವಿವರ | 7 |
| 4 | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ 2021-22ನೇ ಸಾಲಿನ ಕ್ರಿಯಾಯೋಜನೆ ಹಾಗೂ ಖರ್ಚಾಗಿರುವ ಅನುದಾನ ಮತ್ತು ಉಳಿಕೆ ಅನುದಾನದ ವಿವರ. | 8 |
| 5 | 2021-22ನೇ ಸಾಲಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಸ್ವೀಕೃತವಾಗಿರುವ ಮನವಿಗಳು ಹಾಗೂ ಅವುಗಳ ಮೇಲೆ ಕೈಗೊಂಡ ಕ್ರಮ. | 9 |
| 6 | ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿರುವ ಇನ್‌ಸ್ಯಾನಿಟರಿ ಲೆಟ್ರಿನ್‌ಗಳನ್ನು ಸ್ಯಾನಿಟರಿ ಲೆಟ್ರಿನ್‌ಗಳಾಗಿ ಪರಿವರ್ತಿಸಿರುವ ಬಗ್ಗೆ ಮಾಹಿತಿ | 10 |
| 7 | ರಾಜ್ಯದಲ್ಲಿರುವ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಜಿಲ್ಲಾವಾರು ವಿವರ | 11 |
| 8 | 1993 ರಿಂದ 2021-22ರವರೆಗೆ ರಾಜ್ಯದಲ್ಲಿ ಮ್ಯಾನ್‌ಹೋಲ್/ಸೆಪ್ಟಿಕ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಮೃತಪಟ್ಟವರ ವರ್ಷವಾರು ಮಾಹಿತಿ. | 12 |
| 9 | ಆಯೋಗ ನಿರ್ವಹಿಸಿದ ಗಮನಾರ್ಹ ಕೆಲಸಗಳು | 13-15 |
| 10 | 2021-22ನೇ ಸಾಲಿನ ಆಯೋಗದ ಶಿಫಾರಸ್ಸುಗಳು. | 16-18 |
| 11 | ಆಯೋಗದ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮತ್ತು ಸರ್ಕಾರದ ಮಟ್ಟದಲ್ಲಿ ಪೌರ ಕಾರ್ಮಿಕರ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮಸ್ಯೆಗಳ ಕುರಿತು ವಿವಿಧ ದಿನಾಂಕಗಳಲ್ಲಿ ನಡೆದ ಸಭೆಗಳಲ್ಲಿ ಕೈಗೊಂಡ ತೀರ್ಮಾನ. | |
| ಎ | ಮೈಸೂರು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ದಿ:19.05.2021ರಂದು ನಡೆದ ಸಭೆ. | 19-20 |
| ಬಿ | ಮಂಡ್ಯ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಿ:31.05.2021ರಂದು ನಡೆದ ಸಭೆ. | 21 |
| ಸಿ | ತಲಕಾಡು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಳಚರಂಡಿಯನ್ನು ಬರಿಗೈಯಲ್ಲಿ ಸ್ವಚ್ಛತೆ ಮಾಡಿರುವ ಬಗ್ಗೆ ದಿ:08.06.2021ರಂದು ಸ್ಥಳ ಪರಿಶೀಲನೆ ಮತ್ತು ಸಭೆ. | 22 |
| ಡಿ | ಧಾರವಾಡ ಜಿಲ್ಲೆಯಲ್ಲಿ ದಿ:23.06.2021ರಂದು ನಡೆದ ಪರಿಶೀನಾ ಸಭೆ. | 23 |
| ಇ | ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ದಿ:24.06.2021ರಂದು ನಡೆದ ಸಭೆ. | 24-25 |
| ಎಫ್ | ಬಳ್ಳಾರಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಫಾಯಿ ಕರ್ಮಚಾರಿಗಳ ಕುಂದುಕೊರತೆ ಹಾಗೂ ಪುನರ್ವಸತಿ ಯೋಜನಾ ಅನುಷ್ಟಾನ ಪ್ರಗತಿ ಪರಿಶೀಲನಾ ಕುರಿತು ದಿ:07.07.2021ರಂದು ನಡೆದ ಸಭೆ. | 26 |
| ಜಿ | ರಾಯಚೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಫಾಯಿ ಕರ್ಮಚಾರಿಗಳ ಕುಂದು ಕೊರತೆಗಳ ಬಗ್ಗೆ ದಿ:23.07.2021ರಂದು ನಡೆದ ಸಭೆ. | 27 |
| ಐ | ರಾಜ್ಯದಲ್ಲಿಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಹಾಗೂ ಮ್ಯಾನ್‌ಹೋಲ್ ನಲ್ಲಿ ಮೃತಪಟ್ಟ ಅವಲಂಬಿತರಿಗೆ ಪುನರ್ವಸತಿ ಕಲ್ಪಿಸಿರುವ ಕುರಿತು ದಿ:02.09.2021 ರಂದು ನಡೆದ ಸಭೆ. | 28 |

| | | |
|---|---|---|
| ಜೆ | ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ದಾಂಡೇಲಿ ಜಂಗಲ್ ರೆಸಾರ್ಟ್‌ನಲ್ಲಿ ರಾಜ್ಯದಲ್ಲಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಹಾಗೂ ಮ್ಯಾನ್ ಹೋಲ್‌ನಲ್ಲಿ ಮೃತಪಟ್ಟ ಅವಲಂಬಿತರಿಗೆ ಪುನರ್ವಸತಿ ಕಲ್ಪಿಸಿರುವ ಬಗ್ಗೆ ದಿ:16.12.2021ರಂದು ನಡೆದ ಸಭೆ. | 29 |
| ಕೆ | ದಿ:11.01.2022ರಂದು ಎಂ.ಎಸ್.ಕಾಯ್ದೆ 2013ರ ನಿಯಮ ಉಲ್ಲಂಘನೆ ಹಾಗೂ ಮ್ಯಾನ್‌ಹೋಲ್‌ಗಳಲ್ಲಿ ಕಾರ್ಯನಿರ್ವಹಿಸುವಾಗ ಮೃತಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಕಾರ್ಮಿಕರ ಕುಟುಂಬದ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಕುರಿತು ನಡೆದ ವಿಡೀಯೋಕಾನ್ಫರೆನ್ಸ್ ಸಭೆ. | 30 |
| ಎಲ್ | ಬೆಂಗಳೂರು ನಗರ ಜಿಲ್ಲೆಯಲ್ಲಿ 2013ರಲ್ಲಿ ಗುರುತಿಸಲ್ಪಟ್ಟ ಎಲ್ಲಾ ಮ್ಯಾನ್ಯುಯಲ್ ಎಂ.ಎಸ್.ಕಾಯ್ದೆ ಮತ್ತು ನಿಯಮ 2013ರ ಪ್ರಕಾರ ಪುರ್ನವಸತಿ ಕಲ್ಪಿಸಿರುವ ಕುರಿತು ದಿ:03.03.2022ರಂದು ನಡೆದ ಸಭೆ. | 31 |
| ಎಮ್ | ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳ ಕುಂದುಕೊರತೆ ಕುರಿತು ದಿ:05.03.2022ರಂದು ನಡೆದ ಸಭೆ. | 32 |
| ಎನ್ | ಶಿವಮೊಗ್ಗ ಜಿಲ್ಲೆಯಲ್ಲಿ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ದಿ:17.03.2022ರಂದು ನಡೆಸ ಸಭೆ. | 33 |
| ಒ | ರಾಮನಗರ ಜಿಲ್ಲಾ ಪಂಚಾಯತ್‌ನಲ್ಲಿ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ದಿ:29.03.2022ರಂದು ನಡೆಸ ಸಭೆ. | 34 |
| ಪಿ | ಆಯೋಗದ ಮಾನ್ಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರು ರಾಜ್ಯಾದ್ಯಂತ ಜಿಲ್ಲಾ ಪ್ರವಾಸಕೈಗೊಂಡಿರುವ ಛಾಯಾಚಿತ್ರಗಳ ವಿವರಗಳು. | 35-38 |

## "ಅಧ್ಯಕ್ಷರ ನುಡಿ"

ಕರ್ನಾಟಕ ರಾಜ್ಯದಲ್ಲಿ ಸಫಾಯಿ ಕರ್ಮಚಾರಿಗಳು ಎದುರಿಸುತ್ತಿರುವ ಸಮಸ್ಯೆಗಳು/ಕುಂದು ಕೊರತೆಗಳನ್ನು ಗಣನೆಗೆ ತೆಗೆದುಕೊಂಡು, ಇವರಿಗೆ ಸಮಾಜದಲ್ಲಿ ನೀಡಿರುವ ಸ್ಥಾನಮಾನ, ಸೌಲಭ್ಯಗಳು ಮತ್ತು ಅವಕಾಶಗಳಲ್ಲಿನ ಅಸಮಾನತೆಯನ್ನು ನಿರ್ಮೂಲನೆ ಮಾಡುವುದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ರಚನಾತ್ಮಕ ಕಾರ್ಯಕ್ರಮಗಳಾಗಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಅಧಿನಿಯಮ 2013ರನ್ವಯ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗವನ್ನು ಸ್ಥಾಪಿಸಲಾಗಿದೆ.

ಕರ್ನಾಟಕ ಸರ್ಕಾರದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ.ಬಿ.ಎಸ್.ಯಡಿಯೂರಪ್ಪನವರು ಸಫಾಯಿ ಕರ್ಮಚಾರಿ/ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕಾಯ್ದೆ–2013ನ್ನು ಪರಿಣಾಮಕಾರಿಯಾಗಿ ಮಲಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧ ಮಾಡಲು ಇವರಿಗೆ ಗತಕಾಲದಿಂದ ಆಗುತ್ತಿರುವ ಅನ್ಯಾಯವನ್ನು ನಿರ್ಮೂಲನೆ ಮಾಡಲು ದಿ:01.12.2020ರಂದು ನನ್ನನ್ನು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿರುತ್ತಾರೆ. ಸರ್ಕಾರವು ಆಯೋಗದ ಅಧ್ಯಕ್ಷರ ಸ್ಥಾನವನ್ನು ನೀಡಿದ ಸಂದರ್ಭದಲ್ಲಿ ಈ ಹಿಂದೆ ಕರ್ನಾಟಕ ರಾಜ್ಯದ ಆರ್ಥಿಕ ವಾರ್ತಾ ಮತ್ತು ಪ್ರಚಾರ ಇಲಾಖೆ, ತೋಟಗಾರಿಕೆ, ಸಣ್ಣ ಕೈಗಾರಿಕೆ ಮತ್ತು ಕೃಷಿ ಖಾತೆಗಳನ್ನು ನಿಷ್ಠೆಯಿಂದ ನಿಭಾಯಿಸಿರುವ ನನಗೆ ಈ ಆಯೋಗದ ಅಧ್ಯಕ್ಷರ ಸ್ಥಾನ ನೀಡಿದ್ದರಿಂದ ಗೊಂದಲವಿತ್ತು. ಈ ಸಂದರ್ಭದಲ್ಲಿ ಶ್ರೀ ಶ್ರೀ ಶ್ರೀ ಜಗದ್ಗುರು ಶಿವರಾತ್ರಿ ದೇಸಾಯಿ ಕೇಂದ್ರ ಮಹಾಸ್ವಾಮಿಗಳು, ಸುತ್ತೂರು ಮಠ, ಮೈಸೂರು ಇವರು ಈ ಆಯೋಗದ ಅಧ್ಯಕ್ಷರ ಸ್ಥಾನ ದೊರೆತಿರುವುದು ಬಹಳಷ್ಟು ಸಂತಸದ ವಿಷಯವಾಗಿದೆ. ಅತಿ ಕಟ್ಟಕಡೆಯ ಜನರ ಸೇವೆಯನ್ನು ಮಾಡುವುದು ಪುಣ್ಯವೆಂದು ಭಾವಿಸಿ ಇವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಬೆಳವಣಿಗೆಗೆ ಶ್ರಮಿಸಿ ಎಂದು ನಿರ್ದೇಶಿಸಿದರು.

ಸಫಾಯಿ ಕರ್ಮಚಾರಿಗಳಿಗೆ ಸ್ವಚ್ಛತೆ, ವೈದ್ಯಕೀಯ ಸೇವೆ, ಅವರ ಮಕ್ಕಳ ವಿದ್ಯಾಭ್ಯಾಸ, ಯು.ಜಿ.ಡಿ. ಸ್ವಚ್ಛಗೊಳಿಸುವಾಗ ಮಾನವ ಶಕ್ತಿ ಬಳಕೆ ಮಾಡದೇ ಯಂತ್ರಗಳನ್ನು ಉಪಯೋಗಿಸುವುದು ಹಾಗೂ ಯಂತ್ರಗಳನ್ನು ಉಪಯೋಗಿಸದಿದ್ದಲ್ಲಿ ದಂಡ ವಿಧಿಸುವುದು, ಮೂಲಭೂತ ಸೌಕರ್ಯ ಕಲ್ಪಿಸುವ ಮುಂತಾದ ವಿಷಯಗಳ ಕುರಿತು ಆಯೋಗದಿಂದ ಅರಿವು ಮೂಡಿಸುವ ಕಾರ್ಯಕ್ರಮವನ್ನು ಸರ್ಕಾರೇತರ ಸಂಸ್ಥೆಗಳ ಹಾಗೂ ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಜಿಲ್ಲಾಧಿಕಾರಿಗಳ ಮೂಲಕ ನೋಡಲ್ ಅಧಿಕಾರಿಗಳ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗುತ್ತಿರುತ್ತದೆ.

ಕೋವಿಡ್-19 ಸಮಯದಲ್ಲಿ ಎಲ್ಲಾ ಪೌರಕಾರ್ಮಿಕರು ತಮ್ಮ ಪ್ರಾಣವನ್ನು ಲೆಕ್ಕಿಸದೇ ಸಮಾಜದ ಆರೋಗ್ಯವನ್ನು ರಕ್ಷಿಸುವ ಸಲುವಾಗಿ ಪ್ರತಿನಿತ್ಯ ಕಾರ್ಯನಿರ್ವಹಿಸಿ ಕೊರೋನಾ ನಿರ್ಮೂಲನೆಗಾಗಿ ಶ್ರಮಿಸಿರುತ್ತಾರೆ. ಇಂತಹ ಆರೋಗ್ಯ ರಕ್ಷಕರನ್ನು ಕಾಪಾಡುವ ನಿಟ್ಟಿನಲ್ಲಿ ಹಲವು ಜಿಲ್ಲೆಗಳಿಗೆ ಖುದ್ದಾಗಿ ಭೇಟಿ

ನೀಡಿ ಅವರಿಗೆ ನೀಡಬೇಕಾಗಿರುವ ರಕ್ಷಣಾ ಸಾಮಗ್ರಿಗಳನ್ನು ಕಡ್ಡಾಯವಾಗಿ ನೀಡಲು ನಿರ್ದೇಶಿಸಲಾಗಿರುತ್ತದೆ ಹಾಗೂ ಅವರು ಕೆಲಸ ಮಾಡುವ ಸ್ಥಳಗಳಿಗೆ ಭೇಟಿ ನೀಡಿ ಅವರ ಕುಂದುಕೊರತೆಗಳನ್ನು ಆಲಿಸಿ ಸಮಸ್ಯೆಗೆ ಪರಿಹಾರ ಕಲ್ಪಿಸಲಾಗಿದೆ.

ಎಂ.ಎಸ್ ಕಾಯ್ದೆ-2013ರ ಪ್ರಕಾರ, ಮಲಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಗೊಳಿಸಿದ್ದರೂ ಸಹ, ಹಲವು ಕಡೆ ಈ ಬಗ್ಗೆ ಅರಿವಿಲ್ಲದೆ ನಗರ ಸ್ಥಳೀಯ ಸಂಸ್ಥೆಯ ಕಾರ್ಮಿಕರಲ್ಲದೆ ಇತರೆ ಕೂಲಿ ಕಾರ್ಮಿಕರನ್ನು ಬಳಸಿಕೊಂಡು ಸ್ವಚ್ಛಗೊಳಿಸಿದಂತಹ ಗುತ್ತಿಗೆದಾರರು/ಅಧಿಕಾರಿಗಳ ಮೇಲೆ ಕಾಯ್ದೆಯ ಪ್ರಕಾರ ದಂಡ ಮತ್ತು ಶಿಕ್ಷೆಯನ್ನು ಸಹ ವಿಧಿಸಲಾಗಿರುತ್ತದೆ ಹಾಗೂ ಈ ಬಗ್ಗೆ ಸಾರ್ವಜನಿಕರಲ್ಲಿ ರೇಡಿಯೋ ಜಿಂಗಲ್ಸ್‌ನ ಮೂಲಕ ಅರಿವು ಮೂಡಿಸಲು ಕ್ರಮ ಹಮ್ಮಿಕೊಳ್ಳಲಾಗಿರುತ್ತದೆ. ಕಾಯ್ದೆಯ ಬಗ್ಗೆ ಸಂಪೂರ್ಣವಾಗಿ ತಿಳಿಯಲು ಬಸ್‌ನಿಲ್ದಾಣ, ಸರ್ಕಾರಿ ಆಸ್ಪತ್ರೆಗಳು, ಸರ್ಕಾರಿ ಸಂಸ್ಥೆಗಳ ಮುಂದೆ ಹಾಗೂ ಇನ್ನಿತರೆ ಸಾರ್ವಜನಿಕರು ಸೇರುವ ಸ್ಥಳಗಳಲ್ಲಿ ಸೈನ್‌ಬೋರ್ಡ್‌ಗಳನ್ನು ಸಹ ಅಳವಡಿಸಲಾಗಿರುತ್ತದೆ. ಎಂ.ಎಸ್ ಕಾಯ್ದೆ ಹಾಗೂ ನಿಯಮ-2013ರ ಬಗ್ಗೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳಿಗೆ ಸಂಪೂರ್ಣವಾಗಿ ಅರಿವು ಮೂಡಿಸುವ ಸಂಬಂಧ 15 ಜಿಲ್ಲೆಗಳಲ್ಲಿ ತರಬೇತಿಯನ್ನು ಸಹ ಹಮ್ಮಿಕೊಳ್ಳಲಾಗಿರುತ್ತದೆ.

ರಾಜ್ಯದ ಹಲವು ಜಿಲ್ಲೆಗಳಿಗೆ ಭೇಟಿ ನೀಡಿದ ಸಂದರ್ಭಗಳಲ್ಲಿ ಸರಿಯಾದ ಪರಿಕರಗಳನ್ನು ಧರಿಸದೇ ಇರುವುದನ್ನು ಖುದ್ದಾಗಿ ಗಮನಿಸಿ ಕಾರ್ಮಿಕರ ಬಳಿ ವಿಚಾರಣೆ ನಡೆಸಿದಾಗ, ಹಲವು ಪೌರಕಾರ್ಮಿಕರಿಗೆ ಸುರಕ್ಷತಾ ಪರಿಕರಗಳನ್ನು ವಿತರಿಸಲಾಗಿರುತ್ತದೆ. ಆದರೆ, ಅವುಗಳನ್ನು ಧರಿಸಲು ತೊಂದರೆ ಇರುವ ಕಾರಣ ಅವುಗಳನ್ನು ಧರಿಸಲು ಕಷ್ಟಕರವಾಗಿದೆ ಎಂದು ತಿಳಿಸಿರುತ್ತಾರೆ. ಆದಕಾರಣ, ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ರವರೊಂದಿಗೆ ಸಮಾಲೋಚನೆ ನಡೆಸಿ ರಾಜ್ಯದಲ್ಲಿ ಸುರಕ್ಷತಾ ಪರಿಕರಗಳನ್ನು ಉತ್ಪಾದನೆ ಮಾಡುವ ಸಂಸ್ಥೆಗಳಿಂದ ಪರಿಕರಗಳನ್ನು ಖರೀದಿಸಿ, ನುರಿತ ವೈದ್ಯರು, ಅಭಿಯಂತರರು, ಸಾಮಾಜಿಕ ಕಾರ್ಯಕರ್ತರು, ಕಾನೂನು ತಜ್ಞರನ್ನೊಳಗೊಂಡಂತೆ ತಂಡವನ್ನು ರಚಿಸಿ ಉತ್ತಮ ರೀತಿಯ ಪರಿಕರಗಳ ಬಗ್ಗೆ ಕ್ರಮಕೈಗೊಳ್ಳಲಾಗುತ್ತಿದೆ ಹಾಗೂ ಹಲವು ಜಿಲ್ಲೆಯ ಪೌರಕಾರ್ಮಿಕರ ಕಾಲೋನಿಗಳಿಗೆ ಭೇಟಿ ನೀಡಿ ಅವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವ ಬಗ್ಗೆ ಪರಿಶೀಲಿಸಲಾಗಿರುತ್ತದೆ. ಸರ್ಕಾರದ ವಿವಿಧ ಯೋಜನೆಗಳ ಮೂಲಕ ಮನೆ ಹಾಗೂ ಇತರೆ ಸೌಲಭ್ಯಗಳನ್ನು ಕಲ್ಪಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಲಾಗಿರುತ್ತದೆ.

ಡಿಸೆಂಬರ್, 2020ರಿಂದ ಇಲ್ಲಿಯವರೆಗೆ 5 ಮ್ಯಾನ್‌ಹೋಲ್ ಡೆತ್ ಪ್ರಕರಣಗಳು ಸಂಭವಿಸಿರುತ್ತದೆ. ಈ ಎಲ್ಲಾ ಪ್ರಕರಣಗಳಲ್ಲಿ ಎಂ.ಎಸ್ ಕಾಯ್ದೆ ಹಾಗೂ ನಿಯಮ-2013ರ ಪ್ರಕಾರ ಸಂಬಂಧಪಟ್ಟ ಅಧಿಕಾರಿಗಳು, ಗುತ್ತಿಗೆದಾರರ ಮೇಲೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ಪೊಲೀಸ್ ಇಲಾಖೆ ಹಾಗೂ ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಲಾಗಿರುತ್ತದೆ. ಅಲ್ಲದೆ, ಮ್ಯಾನ್‌ಹೋಲ್ ಸ್ಕ್ಯಾವೆಂಜಿಂಗ್

ನಡೆಯುವ ಸಂಬಂಧ ಮಾನ್ಯ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳಿಗೆ ನಿರ್ದೇಶನ ನೀಡಿ, ಹಲವು ಪ್ರಕರಣಗಳಲ್ಲಿ ದಂಡ, ಶಿಕ್ಷೆಯನ್ನು ವಿಧಿಸಲು ನಿರ್ದೇಶಿಸಲಾಗಿದ್ದು, ಕ್ರಮಕೈಗೊಂಡಿರುತ್ತಾರೆ.

ರಾಜ್ಯದ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಹಾಗೂ ಪೌರಕಾರ್ಮಿಕರ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ಕಾನೂನಾತ್ಮಕವಾಗಿ ಅಭಿವೃದ್ಧಿಗೊಳಿಸಲು ರಾಷ್ಟ್ರೀಯ ಕಾನೂನು ಶಾಲೆ ರವರ ಮೂಲಕ ಸಂಶೋಧನೆ ನಡೆಸಿ, ಸಂಶೋಧನಾ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮವಹಿಸಿದೆ.

ರಾಜ್ಯದಲ್ಲಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸುವ ಸಲುವಾಗಿ ರಾಜ್ಯ ಸರ್ಕಾರವು 2013ರಿಂದ ಇಲ್ಲಿವರೆಗೆ 12 ಜಿಲ್ಲೆಗಳಲ್ಲಿ ಸಮೀಕ್ಷೆ ಕೈಗೊಂಡು 5,080 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲಾಗಿರುತ್ತದೆ. ಇನ್ನುಳಿದ 18 ಜಿಲ್ಲೆಗಳ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆಯನ್ನು ನವೆಂಬರ್, 2021ರಲ್ಲಿ ಪ್ರಾರಂಭಿಸಲಾಗಿದ್ದು, ಫೆಬ್ರವರಿ, 2022ಕ್ಕೆ ಅಂತ್ಯಗೊಳ್ಳಲಿದೆ.

ರಾಜ್ಯದ ಖಾಸಗಿವಲಯಗಳಾದ ಕಂಪನಿಗಳು, ಆಸ್ಪತ್ರೆಗಳು, ಮಾಲ್‌ಗಳು, ಹೋಟೆಲ್‌ಗಳು ಹಾಗೂ ಇನ್ನಿತರೆ ಕಡೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರ ಪಟ್ಟಿ ಲಭ್ಯವಿಲ್ಲದೇ ಇರುವುದರಿಂದ ಇವರಿಗೆ ಸೌಲಭ್ಯಗಳನ್ನು ಕಲ್ಪಿಸುವುದು ಅಸಾಧ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು ರವರ ಮುಖಾಂತರ ಪೌರ ಕಾರ್ಮಿಕರ ಸಮೀಕ್ಷೆ ನಡೆಸಲು ಕ್ರಮವಹಿಸಿದೆ.

ಆಯೋಗದ ಕಾರ್ಯಚಟುವಟಿಕೆಗಳನ್ನು ಘನ ಸರ್ಕಾರವು ಗಮನಿಸಿ ಆಯೋಗದ ಅಧ್ಯಕ್ಷರಾದ ನನಗೆ ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿರವರು ಸಚಿವ ಸಂಪುಟ ದರ್ಜೆಯನ್ನು ನೀಡಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕಳೆದ ಒಂದು ವರ್ಷದಲ್ಲಿ ಈ ಪುಸ್ತಕದಲ್ಲಿ ನಮೂದಿಸಿರುವ ಅಂಶಗಳನ್ನು ಕ್ರಮಕೈಗೊಳ್ಳಲು ಕಾರಣರಾಗಿರುವ ಆಯೋಗದ ಕಾರ್ಯದರ್ಶಿ ಹಾಗೂ ಎಲ್ಲಾ ಸಿಬ್ಬಂದಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಹಾಗೂ ಸಮಾಜ ಕಲ್ಯಾಣ ಇಲಾಖಾ ಸಚಿವರಾದ ಶ್ರೀ.ಕೋಟಾ ಶ್ರೀನಿವಾಸ್ ಪೂಜಾರಿ ರವರಿಗೂ ಈ ಎಲ್ಲಾ ಸಾಧನೆಗಳನ್ನು ಮಾಡಲು ಕಾರಣೀಭೂತರಾಗಿರುವುದರಿಂದ ಅವರಿಗೂ ಸಹ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಹಿ/–
**ಎಂ.ಶಿವಣ್ಣ (ಕೋಟೆ)**
ಅಧ್ಯಕ್ಷರು,
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ
ಆಯೋಗ, ಬೆಂಗಳೂರು

## ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಕರ್ತವ್ಯ ಮತ್ತು ಜವಾಬ್ದಾರಿಗಳು

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗವು ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 50 ಶಾಸನ 2012 ದಿನಾಂಕ:04-01-2013ರನ್ವಯ ರಚನೆಯಾಗಿರುತ್ತದೆ. ಅದರಂತೆ ಆಯೋಗವು ದಿನಾಂಕ:01-02-2013 ರಿಂದ ಅಧಿಕೃತವಾಗಿ ನಂ.1/14, ದಕ್ಷಿಣ ವಿಂಗ್ ನೆಲಮಹಡಿ, ಸಿಲ್ವರ್ ಜೂಬ್ಲಿ ಬ್ಲಾಕ್, ಪಾರ್ಟ್ ಆಫ್ ಯೂನಿಟಿ ಬಿಲ್ಡಿಂಗ್ ಕಾಂಪ್ಲೆಕ್ಸ್, ಮಿಷನ್ ರೋಡ್, ಬೆಂಗಳೂರು-27 ಇಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದೆ.

ಸಫಾಯಿ ಕರ್ಮಚಾರಿಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಹಾಗೂ ಸಾಮಾಜಿಕ ಭದ್ರತೆಗಾಗಿ ಆಯೋಗವು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಅಧಿನಿಯಮ, 2013ರ ಕರ್ನಾಟಕ ಅಧಿನಿಯಮ ಸಂಖ್ಯೆ 2ರನ್ವಯ ಪ್ರಕಾರ್ಯಗಳನ್ನು ನೆರವೇರಿಸುತ್ತಿದೆ.

ಕೇಂದ್ರ ಸರ್ಕಾರವು ಹೊರಡಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರ ಕಾಯ್ದೆ ಮತ್ತು ನಿಯಮವನ್ನು ಪರಿಣಾಮಕಾರಿಯಾಗಿ ರಾಜ್ಯದಲ್ಲಿ ಅನುಷ್ಠಾನದ ಮೇಲ್ವಿಚಾರಣೆ ಮಾಡುವ ಸಂಬಂಧ ಯುಕ್ತ ಪ್ರಾಧಿಕಾರವನ್ನಾಗಿ ನೇಮಿಸಿದೆ.

**ಸಫಾಯಿ ಕರ್ಮಚಾರಿಗಳೆಂದರೆ**: ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಖಾಯಂ ಅಥವಾ ಗುತ್ತಿಗೆ ಆಧಾರದ ಮೇಲೆ ರಸ್ತೆ ಗುಡಿಸಲು ಅಥವಾ ನೈರ್ಮಲ್ಯ ಮತ್ತು ಸ್ವಚ್ಛತಾ ಕೆಲಸಗಳನ್ನು ನಿರ್ವಹಿಸಲು ನೇಮಕ ಮಾಡಿಕೊಳ್ಳಲಾದ ವ್ಯಕ್ತಿಗಳು, ಸಫಾಯಿ ಕರ್ಮಚಾರಿಗಳೆಂದರೆ ಮೂಲತ: ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಲ್ಲ.

**ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಎಂದರೆ**: ದೈಹಿಕವಾಗಿ ಮನುಷ್ಯನ ಮಲ-ಮೂತ್ರವನ್ನು ಸಂಪೂರ್ಣ ಕೊಳೆಯುವ ಮೊದಲೇ ಸ್ವಚ್ಛಗೊಳಸಲು ತೆರೆದ ಚರಂಡಿಗಳು, ಗುಂಡಿಗಳು, ರೈಲ್ವೆಹಳಿಗಳಂದ ವಿಲೇವಾರಿ ಮಾಡುವ ಅನೈರ್ಮಲ್ಯ ಕಾರ್ಯದಲ್ಲಿ ನಿರತನಾಗಿರುವ ಅಥವಾ ನಿಯೋಜನೆಗೊಂಡಿರುವ ಒಬ್ಬ ವ್ಯಕ್ತಿ.

## ಆಯೋಗದ ಕರ್ತವ್ಯ & ಜವಾಬ್ದಾರಿಗಳು:

ಕೇಂದ್ರ ಸರ್ಕಾರದ ಕಾಯ್ದೆ **"THE PROHIBITION OF EMPLOYMENT AS A MANUAL SCAVENGERS AND THEIR REHABILITATION ACT AND RULES 2013"**ರಲ್ಲಿ ತಿಳಿಸಿರುವ ಕಂಡಿಕೆಗಳ ಅಂಶಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆಯೋಗವು ಶ್ರಮಿಸುತ್ತಿದೆ. ರಾಜ್ಯ ಆಯೋಗವು "**ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ, ನವದೆಹಲಿ**" ಕಾಲಕಾಲಕ್ಕೆ ನೀಡುವ ಸಲಹೆ ಸೂಚನೆಗಳನ್ನು ಪಾಲಿಸುತ್ತಿದೆ.

ಆಯೋಗವು ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಹೊಂದಿದ್ದು, ಸಿವಿಲ್ ನ್ಯಾಯಾಲಯದ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಆಯೋಗವು quazi judicial ಅಧಿಕಾರವನ್ನು ಹೊಂದಿದ್ದು 1-ಅಧ್ಯಕ್ಷರು, 2-ಸದಸ್ಯರು (1 ಮಹಿಳೆ + 1 ಪುರುಷ) ಹೊಂದಿದ್ದು ಇವರು ಸರ್ಕಾರದಿಂದ ನಾಮ ನಿರ್ದೇಶಿತರಾಗಿರುತ್ತಾರೆ.

1. ಕಾಲಮಿತಿ ಕ್ರಿಯಾಯೋಜನೆಯಡಿಯಲ್ಲಿ ಸಫಾಯಿ ಕರ್ಮಚಾರಿಗಳಿಗೆ ನೀಡಿರುವ ಸ್ಥಾನಮಾನ, ಸೌಲಭ್ಯಗಳು ಮತ್ತು ಅವಕಾಶಗಳಲ್ಲಿನ ಅಸಮಾನತೆಯನ್ನು ನಿರ್ಮೂಲ ಮಾಡುವುದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ನಿರ್ದಿಷ್ಟ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು:
2. ಸಫಾಯಿ ಕರ್ಮಚಾರಿಗಳ ಸಾಮಾಜಿಕ ಮತ್ತು ಆರ್ಥಿಕ ಪುನರ್ವಸತಿಗೆ ಸಂಬಂಧಿಸಿದ ಕಾರ್ಯಕ್ರಮಗಳು ಮತ್ತು ಅನುಷ್ಠಾನಗಳ ಅಧ್ಯಯನ ಮಾಡುವುದು ಮತ್ತು ಮೌಲ್ಯಮಾಪನ ಮಾಡುವುದು ಹಾಗೂ ಅಂತಹ ಕಾರ್ಯಕ್ರಮಗಳ ಮತ್ತು ಯೋಜನೆಗಳ ಅನುಷ್ಠಾನವನ್ನು ಅಧ್ಯಯನ ಮಾಡುವುದು ಮತ್ತು ಮೌಲ್ಯಮಾಪನ ಮಾಡುವುದು ಹಾಗೂ ಅಂತಹ ಕಾರ್ಯಕ್ರಮಗಳ ಮತ್ತು ಯೋಜನೆಗಳ ಸಮನ್ವಯ ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.
3. ನಿರ್ದಿಷ್ಟ ಕುಂದು-ಕೊರತೆಗಳನ್ನು ವಿಚಾರಿಸುವುದು ಎಂದರೆ:-
    i. ಸಫಾಯಿ ಕರ್ಮಚಾರಿಗಳ ಯಾವುದೇ ವರ್ಗಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ಅಥವಾ ಯೋಜನೆಗಳು.
    ii. ಸಫಾಯಿ ಕರ್ಮಚಾರಿಗಳ ತೊಂದರೆಗಳನ್ನು ಶಮನಗೊಳಿಸುವ ಉದ್ದೇಶವನ್ನು ಹೊಂದಿರುವ ತೀರ್ಮಾನಗಳು, ಮಾರ್ಗದರ್ಶನಗಳು ಅಥವಾ ಸೂಚನೆಗಳು;
    iii. ಸಫಾಯಿ ಕರ್ಮಚಾರಿಗಳ ಸಾಮಾಜಿಕ ಮತ್ತು ಆರ್ಥಿಕ ಏಳಿಗೆಗಾಗಿ ಕ್ರಮಗಳು.

iv. ಇವುಗಳನ್ನು ಅನುಷ್ಠಾನಕ್ಕೆ ತರದಿರುವ ವಿಷಯಗಳಿಗೆ ಸಂಬಂಧಿಸಿದ ಅಂಶಗಳನ್ನು ಗಮನಿಸುವುದು.

4. ಸಫಾಯಿ ಕರ್ಮಚಾರಿಗಳು ಎದುರಿಸುತ್ತಿರುವ ತೊಂದರೆಗಳು ಮತ್ತು ಕುಂದುಕೊರತೆಗಳನ್ನು ಪರಿಗಣಿಸಿ, ಸಫಾಯಿ ಕರ್ಮಚಾರಿಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ರಾಜ್ಯ ಸರ್ಕಾರಕ್ಕೆ ನಿಯತಕಾಲಿಕ ವರದಿಗಳನ್ನು ಸಲ್ಲಿಸುವುದು,
5. ರಾಜ್ಯ ಸರ್ಕಾರವು ತನಗೆ ಕಳುಹಿಸಬಹುದಾದ ಯಾವುದೇ ಇತರೆ ವಿಷಯ.

ಆಯೋಗವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ರಾಜ್ಯ ಸರ್ಕಾರದ ಇಲಾಖೆಗಳು ಮತ್ತು ಅದರ ಏಜೆನ್ಸಿಗಳು, ನಿಗಮಗಳು ಮತ್ತು ಸ್ಥಳೀಯ ಸಂಸ್ಥೆಗಳಿಂದ ನಿರ್ದಿಷ್ಟಪಡಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ತರಿಸಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು.

**ಆಯೋಗದ ಅಧಿಕಾರಗಳು**: ಆಯೋಗವು, 8ನೇ ಪ್ರಕರಣದ ಅಡಿಯಲ್ಲಿ ಯಾವುದೇ ವಿಷಯವನ್ನು ತನಿಖೆ ಮಾಡುವಾಗ, ವಿಚಾರಣೆ ಮಾಡುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ ಅಡಿಯಲ್ಲಿ ಮತ್ತು ವಿಶೇಷವಾಗಿ ಸಂಬಂಧಪಟ್ಟಂತೆ ಒಂದು ದಾವೆಯನ್ನು ವಿಚಾರಣೆ ಮಾಡುವಾಗ ಸಿವಿಲ್ ನ್ಯಾಯಾಲಯವು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಎಂದರೆ,

i. ರಾಜ್ಯದ ಯಾವುದೇ ಭಾಗದಿಂದ ಯಾವೊಬ್ಬ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಪ್ರಮಾಣ ಮಾಡಿಸುವ ಮೂಲಕ ಅವನನ್ನು ಪರೀಕ್ಷಿಸುವುದು

ii. ಯಾವುದೇ ದಾಖಲೆಗಳನ್ನು ಮತ್ತು ಸಾಕ್ಷಿಗಳನ್ನು ಶೋಧಿಸುವುದನ್ನು ಮತ್ತು ಹಾಜರುಪಡಿಸುವುದನ್ನು ಅಗತ್ಯಪಡಿಸುವುದು

iii. ಅಫಿಡೆವಿಟ್‌ಗಳ ಮೂಲಕ ಯಾವುದೇ ಸಾಕ್ಷ್ಯವನ್ನು ಸ್ವೀಕರಿಸುವುದು

iv. ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ನೀಡುವಂತೆ ಅಗತ್ಯಪಡಿಸುವುದು

v. ನಿಯಮಿಸಬಹುದಾದಂತ ಇತರ ಯಾವುದೇ ವಿಷಯ.

# ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದಅಧಿಕಾರಿ/ಸಿಬ್ಬಂದಿಗಳ ವಿವರ.

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ಮಂಜೂರಾದ ಹುದ್ದೆಗಳು | ಭರ್ತಿ ಹುದ್ದೆಗಳು |
|---|---|---|---|
| 1 | ಶ್ರೀಮತಿ.ಆರ್ ರಮಾ<br>ಕಾರ್ಯದರ್ಶಿ | 01 | 01 |
| 2 | ಶ್ರೀಮತಿ. ಸುವರ್ಣ ಬಾಗಿ(ಪ್ರ)<br>ಸಂಶೋಧನಾ ಅಧಿಕಾರಿ | 01 | - |
| 3 | ಶ್ರೀಮತಿ. ಸುವರ್ಣ ಬಾಗಿ<br>ಸಹಾಯಕ ನಿರ್ದೇಶಕರು | 01 | 01 |
| 4 | ಶ್ರೀಮತಿ. ಬಿ.ಎಸ್.ವಿಮಲ<br>ಆಪ್ತ ಕಾರ್ಯದರ್ಶಿ | 01<br>01 | 01 |
| 5 | ಶ್ರೀಮತಿ.ಸುರೇಖ ದೊರೆಗೋಳ್<br>ಕಛೇರಿ ಅಧೀಕ್ಷಕರು | 01 | 01 |
| 6 | ಪ್ರಥಮ ದರ್ಜೆ ಸಹಾಯಕರು | 02 | ಖಾಲಿ ಹುದ್ದೆ<br>(ಹೊರ ಸಂಪನ್ಮೂಲದಿಂದ ಪಡೆಯಲಾಗಿದೆ) |
| 7 | ಆಪ್ತ ಸಹಾಯಕರು | 01 | ಖಾಲಿ ಹುದ್ದೆ<br>(ಹೊರ ಸಂಪನ್ಮೂಲದಿಂದ ಪಡೆಯಲಾಗಿದೆ) |
| 8 | ದ್ವಿತೀಯ ದರ್ಜೆ ಸಹಾಯಕರು/<br>ಡಾಟಾ ಎಂಟ್ರಿ ಆಪರೇಟರ್ | 04 | ಖಾಲಿ ಹುದ್ದೆ<br>(ಹೊರ ಸಂಪನ್ಮೂಲದಿಂದ ಪಡೆಯಲಾಗಿದೆ) |
| 9 | ವಾಹನ ಚಾಲಕರು | 03 | ಖಾಲಿ ಹುದ್ದೆ<br>(ಹೊರ ಸಂಪನ್ಮೂಲದಿಂದ ಪಡೆಯಲಾಗಿದೆ) |
| 10 | ಗ್ರೂಪ್ ‘ ಡಿ’ | 03 | ಖಾಲಿ ಹುದ್ದೆ<br>(ಹೊರ ಸಂಪನ್ಮೂಲದಿಂದ ಪಡೆಯಲಾಗಿದೆ) |
| | **ಒಟ್ಟು** | **18** | **04** |

## 2021-22ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದಲ್ಲಿ ನಿಗದಿಪಡಿಸಿರುವ ಅನುದಾನ.

**(ರೂ.ಲಕ್ಷಗಳಲ್ಲಿ)**

| ಕ್ರ. ಸಂ. | ಕಾರ್ಯಕ್ರಮ | ಒದಗಿಸಿದ ಅನುದಾನ | ಖರ್ಚು |
|---|---|---|---|
| 1 | ಅಧಿಕಾರಿ, ಸಿಬ್ಬಂದಿಗಳ ವೇತನ ಹಾಗೂ ಇನ್ನಿತರೆ ಭತ್ಯೆಗಳು | 60.00 | 44.6 |
| 2 | ಅಧ್ಯಕ್ಷರ ಹಾಗೂ ಸದಸ್ಯರುಗಳ ವೇತನ ಹಾಗೂ ಇನ್ನಿತರೆ ಭತ್ಯೆಗಳು | 10.00 | 10.00 |
| 3 | ಆಯೋಗದ ನಿರ್ವಹಣೆ ಮತ್ತು ಇತರೆ ವೆಚ್ಚಗಳು (ಕಟ್ಟಡ ಬಾಡಿಗೆ, ಹೊರಸಂಪನ್ಮೂಲ ನೌಕರರ ವೇತನ, ಪ್ರವಾಸ, ದೂರವಾಣಿ, ಸಾರಿಗೆ, ಇತರೆ ವೆಚ್ಚ) | 122.62 | 122.62 |
| 4 | ಸಫಾಯಿ ಕರ್ಮಚಾರಿಗಳ ಬಗ್ಗೆ ಹಾಗೂ ಎಂ.ಎಸ್.ಕಾಯ್ದೆ 2013ರ ಅನುಷ್ಠಾನ ಸಂಬಂಧ ಅರಿವು ಮೂಡಿಸುವ ನಿಟ್ಟಿನಲ್ಲಿ ಯೋಜನೆ ಮತ್ತು ಕಾರ್ಯಕ್ರಮವನ್ನು ಆಯೋಜಿಸುವುದು. | 67.38 | 67.38 |
| **ಒಟ್ಟು** | | **260.00** | **244.96** |

- 15.04 ಲಕ್ಷಗಳು ಆಯೋಗದಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳ ಹುದ್ದೆಯು ಖಾಲಿ ಇರುವುದರಿಂದ ವೇತನದ ಉಳಿಕೆ ಮೊತ್ತ.

## 2021-22ನೇ ಸಾಲಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಸ್ವೀಕೃತವಾಗಿರುವ ಮನವಿಗಳು ಹಾಗೂ ಅವುಗಳ ಮೇಲೆ ಕೈಗೊಂಡ ಕ್ರಮ.

| ಕ್ರ.ಸಂ. | ಜಿಲ್ಲೆಗಳು | ಸ್ವೀಕೃತಿ | ಕ್ರಮ ಕೈಗೊಂಡಿರುವ ಮನವಿಗಳ ವಿವರ |
|---|---|---|---|
| 1. | ಬೆಂಗಳೂರು ನಗರ | 57 | 57 |
| 2. | ಬೆಂಗಳೂರು ಗ್ರಾಮಾಂತರ | - | - |
| 3. | ಬಾಗಲಕೋಟೆ | - | - |
| 4. | ಬೆಳಗಾವಿ | 03 | 03 |
| 5. | ಬಳ್ಳಾರಿ | 14 | 14 |
| 6. | ಬೀದರ್ | 03 | 03 |
| 7. | ವಿಜಯಪುರ | 04 | 04 |
| 8. | ಚಾಮರಾಜನಗರ | 19 | 19 |
| 9. | ಚಿಕ್ಕಬಳ್ಳಾಪುರ | - | - |
| 10. | ಚಿಕ್ಕಮಗಳೂರು | - | - |
| 11. | ಚಿತ್ರದುರ್ಗ | 03 | 03 |
| 12. | ದಕ್ಷಿಣ ಕನ್ನಡ | 05 | 05 |
| 13. | ದಾವಣಗೆರೆ | - | - |
| 14. | ಧಾರವಾಡ | 02 | 02 |
| 15. | ಗದಗ | - | - |
| 16. | ಕಲಬುರಗಿ | 02 | 02 |
| 17. | ಹಾಸನ | 02 | 02 |
| 18. | ಹಾವೇರಿ | 02 | 02 |
| 19. | ಕೊಡಗು | - | - |
| 20. | ಕೋಲಾರ | 07 | 07 |
| 21. | ಕೊಪ್ಪಳ | 09 | 09 |
| 22. | ಮಂಡ್ಯ | 07 | 07 |
| 23. | ಮೈಸೂರು | 25 | 25 |
| 24. | ರಾಯಚೂರು | 05 | 05 |
| 25. | ರಾಮನಗರ | - | - |
| 26. | ಶಿವಮೊಗ್ಗ | - | - |
| 27. | ತುಮಕೂರು | - | - |
| 28. | ಉಡುಪಿ | - | - |
| 29. | ಉತ್ತರ ಕನ್ನಡ | 01 | 01 |
| 30. | ಯಾದಗಿರಿ | - | - |
| | **ಒಟ್ಟು** | **174** | **174** |

**ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿರುವ ಇನ್‌ಸ್ಯಾನಿಟರಿ ಲೆಟ್ರಿನ್‌ಗಳನ್ನು ಸ್ಯಾನಿಟರಿ ಲೆಟ್ರಿನ್‌ಗಳಾಗಿ ಪರಿವರ್ತಿಸಿರುವ ಕುರಿತು ಎಲ್ಲಾ ಜಿಲ್ಲಾಧಿಕಾರಿಗಳಿಂದ ಪಡೆದಿರುವ ಮಾಹಿತಿ.**

| ಕ್ರ.ಸಂ | ಜಿಲ್ಲೆಯ ಹೆಸರು | ಗ್ರಾಮಾಂತರ ಪ್ರದೇಶ | ನಗರ ಪ್ರದೇಶ | ಒಟ್ಟು |
|---|---|---|---|---|
| 1 | ಬೆಂಗಳೂರು | 210 | 177 | **387** |
| 2 | ಬೆಂಗಳೂರು (ಉತ್ತರ) | - | | - |
| 3 | ಬಾಗಲಕೋಟೆ | 2 | | **2** |
| 4 | ಬಳ್ಳಾರಿ | 547 | | **547** |
| 5 | ಬೆಳಗಾವಿ | 70 | - | **70** |
| 6 | ಬೀದರ್ | 896 | - | **896** |
| 7 | ಚಾಮರಾಜನಗರ | 4 | 1948 | **1952** |
| 8 | ಚಿಕ್ಕಬಳ್ಳಾಪುರ | 44 | 779 | **823** |
| 9 | ಚಿಕ್ಕಮಗಳೂರು | - | - | - |
| 10 | ರಾಮನಗರ | - | 4875 | **4875** |
| 11 | ಚಿತ್ರದುರ್ಗ | 1 | 5017 | **5018** |
| 12 | ಕೋಲಾರ | 91 | 3333 | **3424** |
| 13 | ದಾವಣಗೆರೆ | 1 | - | **1** |
| 14 | ಹಾಸನ | - | 233 | **233** |
| 15 | ಮಂಡ್ಯ | - | 897 | **897** |
| 16 | ಮೈಸೂರು | 1518 | 1725 | **3243** |
| 17 | ಗದಗ | 325 | 362 | **687** |
| 18 | ಹಾವೇರಿ | 141 | 708 | **849** |
| 19 | ಧಾರವಾಡ | 33 | - | **33** |
| 20 | ಕಲಬುರ್ಗಿ | 462 | - | **462** |
| 21 | ಕೊಡಗು | 4 | - | **4** |
| 22 | ಮಂಗಳೂರು (ದ.ಕ) | - | - | - |
| 23 | ರಾಯಚೂರು | 56 | - | **56** |
| 24 | ಶಿವಮೊಗ್ಗ | - | - | - |
| 25 | ತುಮಕೂರು | 9 | 3961 | **3970** |
| 26 | ಉಡುಪಿ | 197 | | **197** |
| 27 | ಉತ್ತರ ದಕ್ಷಿಣ | 296 | - | **296** |
| 28 | ಯಾದಗಿರಿ | 206 | 760 | **966** |
| 29 | ವಿಜಯಪುರ | 66 | - | **66** |
| 30 | ಕೊಪ್ಪಳ | 387 | - | **387** |
| | **ಒಟ್ಟು** | **5566** | **24775** | **30341** |

## ರಾಜ್ಯದಲ್ಲಿ ಜಿಲ್ಲಾವಾರು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ವಿವರ

| ಕ್ರ. ಸಂ. | ಜಿಲ್ಲೆಯ ಹೆಸರು | 2013ನೇ ಸಾಲಿಗೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಮೀಕ್ಷೆ | 2016ನೇ ಸಾಲಿಗೆ ಗ್ರಾಮೀಣ ಭಾಗಗಳಲ್ಲಿ ಸಮೀಕ್ಷೆ | 2018ನೇ ಸಾಲಿಗೆ ರಾಷ್ಟ್ರೀಯ ಸಮೀಕ್ಷೆ | | ಒಟ್ಟು |
|---|---|---|---|---|---|---|
| | | | | ನಗರ | ಗ್ರಾಮೀಣ | |
| 1 | ಬೆಂಗಳೂರು ನಗರ | - | 90 | 8 | 37 | **135** |
| 2 | ಬೆಂಗಳೂರು ಗ್ರಾಮೀಣ | 7 | 24 | 0 | 55 | **86** |
| 3 | ಬಳ್ಳಾರಿ | - | 10 | - | - | **10** |
| 4 | ಬೀದರ್ | - | 2 | - | - | **2** |
| 5 | ಚಿಕ್ಕಬಳ್ಳಾಪುರ | - | 12 | - | - | **12** |
| 6 | ಹಾವೇರಿ | - | 7 | 22 | 49 | **78** |
| 7 | ಕೋಲಾರ | 91 | 148 | 721 | 264 | **1224** |
| 8 | ಮಂಡ್ಯ | - | 42 | - | - | **42** |
| 9 | ರಾಯಚೂರು | - | 43 | 6 | 43 | **92** |
| 10 | ಶಿವಮೊಗ್ಗ | - | 22 | - | - | **22** |
| 11 | ಉಡುಪಿ | - | 3 | - | - | **3** |
| 12 | ಯಾದಗಿರಿ | - | 14 | - | - | **14** |
| 13 | ಮೈಸೂರು | - | - | - | 1016 | **1016** |
| 14 | ಧಾರವಾಡ | - | - | - | 60 | **60** |
| 15 | ಕಲಬುರಗಿ | - | - | 196 | 17 | **213** |
| 16 | ಕೊಪ್ಪಳ | 2 | - | - | - | **2** |
| 17 | ಬೆಳಗಾವಿ | - | - | - | 42 | **42** |
| 18 | ದಾವಣಗೆರೆ | - | - | 380 | 22 | **402** |
| 19 | ವಿಜಯಪುರ | - | - | 0 | 0 | **0** |
| 20 | ಬಾಗಲಕೋಟೆ | - | - | 0 | 0 | **0** |
| 21 | ಬಿಬಿಎಂಪಿ | 201 | - | 1424 | - | **1625** |
| | **ಒಟ್ಟು** | **301** | **417** | **2757** | **1605** | **5080** |

## 1993 ರಿಂದ 2022 ರವರೆಗೆ ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾರ್ಯ ನಿರ್ವಹಿಸುವಾಗ ಮೃತಪಟ್ಟವರ ಮಾಹಿತಿ

| ಕ್ರ.ಸಂ. | ವರ್ಷ | ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾರ್ಯನಿರ್ವಹಿಸುವಾಗ ಮೃತಪಟ್ಟವರ ಸಂಖ್ಯೆ |
|---|---|---|
| 1 | 1993-94 | - |
| 2 | 1994-95 | - |
| 3 | 1995-96 | 1 |
| 4 | 1998-99 | 3 |
| 5 | 2001-02 | 1 |
| 6 | 2007-08 | 2 |
| 7 | 2008-09 | 7 |
| 8 | 2009-10 | 3 |
| 9 | 2010-11 | 2 |
| 10 | 2011-12 | 7 |
| 11 | 2012-13 | 7 |
| 12 | 2013-14 | 7 |
| 13 | 2015-16 | 13 |
| 14 | 2016-17 | 9 |
| 15 | 2017-18 | 6 |
| 16 | 2018-19 | 4 |
| 17 | 2019-20 | 8 |
| 18 | 2020-21 | 5 |
| 19 | 2021-22 | 5 |
| ಒಟ್ಟು | | 90 |

## 2021-22ನೇ ಸಾಲಿನಲ್ಲಿ ಎಂ.ಎಸ್ ಕಾಯ್ದೆ ಹಾಗೂ ನಿಯಮ-2013ನ್ನು ಅನುಷ್ಠಾನಗೊಳಿಸಲು ಆಯೋಗ ಕೈಗೊಂಡ ಗಮನಾರ್ಹ ಕ್ರಮಗಳು.

1. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ ಹಾಗೂ ನಿಯಮ-2013ರ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಮತ್ತು ಸಫಾಯಿ ಕರ್ಮಚಾರಿಗಳಿಗೆ/ಪೌರಕಾರ್ಮಿಕರಿಗೆ/ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಸರ್ಕಾರದ ವಿವಿಧ ಇಲಾಖೆಗಳಿಂದ ದೊರೆಯುತ್ತಿರುವ ಸೌಲಭ್ಯಗಳ ಮಾಹಿತಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ 198 ವಾರ್ಡ್ ಕಛೇರಿ ಹಾಗೂ ಬಿಬಿಎಂಪಿ ವ್ಯಾಪ್ತಿಯ 52 ಆಸ್ಪತ್ರೆಗಳ ಆವರಣಗಳಲ್ಲಿ ಒಟ್ಟು 250 ಸ್ಥಳಗಳಲ್ಲಿ ಅರಿವು ಮೂಡಿಸುವ ಬಗ್ಗೆ ವ್ಯಾಪಕ ಪ್ರಚಾರ ಮತ್ತು ಜಾಗೃತಿ ಮೂಡಿಸುವ ಸಂಬಂಧ ಎಂ.ಎಸ್ ಕಾಯ್ದೆ ಸೆಕ್ಷನ್‌ಗಳ ಸಂದೇಶ ಸಾರುವ ಸೈನ್‌ಬೋರ್ಡ್‌ಗಳನ್ನು ಅಳವಡಿಸಿದೆ.

2. ರಾಜ್ಯದಲ್ಲಿ ಮ್ಯಾನ್‌ಹೋಲ್/ಸೆಪ್ಟಿಕ್ ಟ್ಯಾಂಕ್/ತೆರೆದ ಚರಂಡಿ/ ಒಳಚರಂಡಿಗಳಲ್ಲಿ ಮೃತಪಟ್ಟ 85 ಕುಟುಂಬಗಳ ಪುನರ್ವಸತಿಗಾಗಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸ್ಥಿತಿ-ಗತಿಗಳ ಕುರಿತು ವಿವರವಾದ ಅಧ್ಯಯನವನ್ನು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ **(I.S.E.C)** ರವರ ಮೂಲಕ ನಡೆಸಲಾಗುತ್ತಿದೆ.

3. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ, ಐ.ಐ.ಎಸ್‌ಸಿ, ರವರ ಸಹಯೋಗದಲ್ಲಿ ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಸಾವುಗಳನ್ನು ತಡೆಯಲು ಅತ್ಯಾಧುನಿಕ ತಂತ್ರಜ್ಞಾನವುಳ್ಳ ಯಂತ್ರೋಪಕರಣಗಳ ಬಳಕೆಯ ಬಗ್ಗೆ ಸಭೆಯನ್ನು ಏರ್ಪಡಿಸಿ ರಾಜ್ಯದಲ್ಲಿ ಏಕರೂಪ ಸುರಕ್ಷತಾ ಪರಿಕರಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.

4. **Elimination of manual cleaning in sewers and septic tanks** ಸಂಬಂಧ ರಾಜ್ಯ ಮತ್ತು ಜಿಲ್ಲಾಮಟ್ಟದಲ್ಲಿ ಸಮಿತಿಯನ್ನು ರಚಿಸಿ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ ಅನುಷ್ಠಾನ ಮತ್ತು ಮೇಲ್ವಿಚಾರಣೆ ನಡೆಸಲು ಕ್ರಮವಹಿಸಲಾಗುತ್ತಿದೆ.

5. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ ಹಾಗೂ ನಿಯಮ-2013ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಆಗುತ್ತಿರುವ ತೊಂದರೆಗಳ ಬಗ್ಗೆ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ಉಪವಿಭಾಗ ಮಟ್ಟದ ಜಾಗೃತಿ ಸಮಿತಿಯ ನಾಮನಿರ್ದೇಶಿತ ಸದಸ್ಯರುಗಳ ಅಭಿಪ್ರಾಯವನ್ನು ಸಂಗ್ರಹಿಸಲು ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಬಗ್ಗೆ ವಿವರಿಸುವ ಕುರಿತು ಒಂದು ದಿನದ ಕಾರ್ಯಗಾರವನ್ನು ನಡೆಸಲಾಗಿದೆ.

6. ರಾಜ್ಯ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರಾದ ಸಮಾಜ ಕಲ್ಯಾಣ ಇಲಾಖೆ ಸಚಿವರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಮುಖ್ಯಸ್ಥರುಗಳ ಸದಸ್ಯತ್ವದೊಂದಿಗೆ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ ಕಾಯ್ದೆ ಮತ್ತು ನಿಯಮ-2013ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು 4ನೇ ರಾಜ್ಯ ಮೇಲ್ವಿಚಾರಣಾ ಸಮಿತಿ ಸಭೆಯನ್ನು ನಡೆಸಲಾಯಿತು.

7. ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ನೀಡುವ ಮಾಸಿಕ ಪಿಂಚಣಿ, ಶೈಕ್ಷಣಿಕ, ಅನುಕಂಪದ ಆಧಾರದ ಮೇಲೆ ನೇಮಕಾತಿ, ಆರೋಗ್ಯ ಸೌಲಭ್ಯಗಳನ್ನು ಮ್ಯಾನ್‌ಹೋಲ್/ಸೆಪ್ಟಿಕ್ ಟ್ಯಾಂಕ್/ಒಳಚರಂಡಿ/ತೆರೆದ ಚರಂಡಿಗಳ ಸ್ವಚ್ಛತಾ ಕಾರ್ಯನಿರ್ವಹಿಸುವಾಗ ಮೃತಪಟ್ಟ ಕುಟುಂಬದ ಅವಲಂಬಿತರಿಗೂ ವಿಸ್ತರಿಸಲು ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು.

8. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ ಕಾಯ್ದೆ ಹಾಗೂ ನಿಯಮ-2013 ಮತ್ತು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಅಧಿನಿಯಮ 2012 ಕಾಯ್ದೆ ಹಾಗೂ ನಿಯಮಗಳ ಬಗ್ಗೆ ಸಾರ್ವಜನಿಕರು ವಿವಿಧ ಇಲಾಖಾ ಅಧಿಕಾರಿಗಳಲ್ಲಿ ಅರಿವು ಮೂಡಿಸುವ ಸಂಬಂಧ 5,000 ಪುಸ್ತಕಗಳನ್ನು ಮುದ್ರಿಸಿ, ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಂಟಿ/ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ನಗರ ಸ್ಥಳೀಯ ಸಂಸ್ಥೆಯ ಎಲ್ಲಾ ಮಹಾನಗರ ಪಾಲಿಕೆ, ನಗರ ಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ವಿತರಿಸಲು ಕ್ರಮವಹಿಸಲಾಗಿದೆ.

9. ರಾಜ್ಯದಲ್ಲಿ ಮಲಹೊರುವ, ಮಲಗುಂಡಿಗಳನ್ನು ಸ್ವಚ್ಛ ಮಾಡುವ ಕಾರ್ಮಿಕರ ಹಾಗೂ ಪೌರಕಾರ್ಮಿಕರ ಸ್ಥಿತಿ-ಗತಿ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಕಾನೂನಾತ್ಮಕ ಸ್ಥಿತಿಗತಿಗಳ ಸ್ಥಾನಮಾನ ಕುರಿತು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ರವರು ನಡೆಸಿದ ಸಂಶೋಧನೆ ಕರಡು ವರದಿಯನ್ನು ಅಂಗೀಕರಿಸಿ ಅನುಮೋದಿಸಲಾಯಿತು.

10. ಕೋವಿಡ್-19 ಸಾಂಕ್ರಾಮಿಕ ರೋಗ ಹರಡುತ್ತಿದ್ದ ಸಮಯದಲ್ಲಿ ಬೆಂಗಳೂರು ನಗರ ವಿವಿಧ ವಾರ್ಡ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪೌರಕಾರ್ಮಿಕರ (ಕೋವಿಡ್-19 ವಾರಿಯರ್ಸ್) ರವರ ಕಾರ್ಯನಿರ್ವಹಣಾ ಅವಧಿಯ ಸ್ಥಿತಿಗತಿಗಳ ಬಗ್ಗೆ ತಿಳಿಯಲು ಹಾಗೂ ಅವರಿಗೆ ಆ ಸಂಧರ್ಭದಲ್ಲಿ ಉಪಯೋಗಿಸಲು ಸರ್ಕಾರವು ನೀಡಿದ ಸುರಕ್ಷತಾ ಸಾಧನಗಳ ಬಗ್ಗೆ ಮೇಲ್ವಿಚಾರಣೆ ಮಾಡಲು ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಿ ಕುಂದುಕೊರತೆಗಳ ಬಗ್ಗೆ ಸರಿಪಡಿಸುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಿರ್ದೇಶನ ನೀಡಲಾಯಿತು.

11. ಕೋವಿಡ್-19 ಮಾರಣಾಂತಿಕ ಸೋಂಕು ಹರಡುತ್ತಿರುವ ಹಿನ್ನೆಲೆಯಲ್ಲಿ ಕಂಟೈನ್‌ಮೆಂಟ್ ಜೋನ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪೌರಕಾರ್ಮಿಕರಿಗೆ ಆರೋಗ್ಯ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಯಿಂದ ನಿಗಧಿಪಡಿಸಿದ ಸುರಕ್ಷತಾ ಪರಿಕರಗಳ ವಿತರಣೆ, ಪೌರಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ, ಸರ್ಕಾರದಿಂದ ನೀಡುತ್ತಿರುವ ಸೌಲಭ್ಯಗಳ ವಿವರ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಮತ್ತು ಉಪಯೋಗಿಸುತ್ತಿರುವ ತಂತ್ರಜ್ಞಾನಗಳ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಲಾಯಿತು.

12. ದಿನಾಂಕ: 07.09.2021ರಂದು ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ 4ನೇ ರಾಜ್ಯ ಮೇಲ್ವಿಚಾರಣಾ ಸಮಿತಿ ಸಭೆಯನ್ನು ನಡೆಸಲಾಯಿತು.

## 2021-22ನೇ ಸಾಲಿನ ಆಯೋಗದ ಶಿಫಾರಸ್ಸುಗಳು.

1. 2013ರ ಪುನರ್ವಸತಿ ಕಾಯ್ದೆ ಕಲಂ 13 (ಬಿ) ಅನ್ವಯ ಈ ಕುಟುಂಬಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ ಸರಕಾರದ ವಿವಿಧ ಯೋಜನೆಗಳ ಅಡಿ ಕೂಡಲೇ ವಿಶೇಷ ವಿದ್ಯಾರ್ಥಿವೇತನ ನೀಡಿ, ಅವರ ವಿದ್ಯಾಭ್ಯಾಸ ಮುಂದುವರೆಸಲು ಅನುಕೂಲವಾಗುವಂತೆ ಅಗತ್ಯವಾದ ಜಾತಿ ಮತ್ತು ಆದಾಯ ಹಾಗೂ (ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವುದು) ಅಸ್ವಚ್ಛತಾ ಕೆಲಸದ ಪ್ರಮಾಣ ಪತ್ರಗಳನ್ನು ಆದ್ಯತೆಯ ಮೇರೆಗೆ ವಿತರಿಸುವಂತೆ ಸಂಬಂಧಿಸಿದ ತಹಶೀಲ್ದಾರರಿಗೆ ಜಿಲ್ಲೆಯ ಜಿಲ್ಲಾಧಿಕಾರಿಗಳು ಸೂಕ್ತ ಆದೇಶ ನೀಡುವುದು.
2. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸುಮಾರು 10 ವರ್ಷಗಳಿಂದ ಕೋವಿಡ್ ಸಮಯದಲ್ಲೂ ತಮ್ಮ ಪ್ರಾಣವನ್ನು ಮುಡಿಪಾಗಿಟ್ಟು ಹಾಲಿ ಕಾರ್ಯನಿರ್ವಹಿಸಿರುವಂತಹ ಕಾರ್ಮಿಕರನ್ನು ಖಾಯಂಗೊಳಿಸಬೇಕೆಂದು ಹಲವಾರು ಸಂಘ ಸಂಸ್ಥೆಗಳು, ಕಾರ್ಮಿಕರು, ಅಹವಾಲುಗಳನ್ನು ಸಲ್ಲಿಸಿರುತ್ತಾರೆ. ಆದ್ದುದರಿಂದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಂಜೂರಾಗಿ ಖಾಲಿಯಿರುವ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡಲು ಹಾಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂ ನೇಮಕಾತಿಗೊಳಿಸುವುದು.
3. ರಾಜ್ಯದಲ್ಲಿ ಬಹುತೇಕ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಶೇ ೯೦ರಷ್ಟು ಪ.ಜಾತಿ/ಪ.ಪಂಗಡ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು ನೇಮಕಾತಿ ಸಂದರ್ಭದಲ್ಲಿ ರೋಸ್ಟರ್ ಪದ್ಧತಿ ಅನುಸರಿಸಿದ ಹಿನ್ನೆಲೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರನ್ನು ಖಾಯಂಗೊಳಿಸು ಸಾಧ್ಯವಾಗಿರುವುದಿಲ್ಲ. ಪೌರಕಾರ್ಮಿಕರ ನೇಮಕಾತಿಯು ವಿಶೇಷ ನೇಮಕಾತಿಯಾಗಿರುವುದರಿಂದ ಒಂದು ಬಾರಿಗೆ ರೋಸ್ಟರ್ ಪದ್ದತಿಯನ್ನು ತೆಗೆದು, ಹಾಲಿ ಕಾರ್ಯನಿರ್ವಹಿಸಿರುವಂತಹ ಆಟೋಡ್ರೈವರ್, ಲೋಡರ್ಸ್, ಕ್ಲೀನರ್ಸ್ ಮತ್ತು ಒಳಚರಂಡಿ ಸ್ವಚ್ಛಗೊಳಿಸುತ್ತಿರುವ ಯುಜಿಡಿ ಕಾರ್ಮಿಕರನ್ನು ಖಾಯಂಗೊಳಿಸುವುದು.
4. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ) ಮತ್ತು ಗ್ರಾಮೀಣ ಭಾಗದಲ್ಲಿ ಶೇ.೯೦ರಷ್ಟು ಮಹಿಳಾ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು ಇವರಿಗೆ ಶೌಚಾಲಯ ವ್ಯವಸ್ಥೆ ಇಲ್ಲದೆ ಶೇ.೬೦ರಷ್ಟು ಮಹಿಳೆಯರಿಗೆ ಆರೋಗ್ಯದಲ್ಲಿ ಏರುಪೇರಾಗಿ ಶಾಶ್ವತ ಖಾಯಿಲೆಗಳಿಗೆ ಒಳಗಾಗಿರುತ್ತಾರೆ ಹಾಗೂ ಅಕಾಲಿಕ ಮರಣ ಹೊಂದುತ್ತಿರುತ್ತಾರೆ. ಆದ್ದರಿಂದ ಅತೀ ತುರ್ತಾಗಿ ಹಾಗೂ ಖಡ್ಡಾಯವಾಗಿ ಮಸ್ಟ್ರಿಂಗ್ ಪಾಯಿಂಟ್‌ಗಳಲ್ಲಿ ವಿಶ್ರಾಂತಿಗೃಹ (ರೆಸ್ಟ್‌ರೂಂ)ಗಳನ್ನು ೩ ತಿಂಗಳ ಕಾಲಾವಧಿಯೊಳಗಾಗಿ ನಿರ್ಮಿಸುವುದು.

5. ಐಪಿಡಿ ಸಾಲಪ್ಪರವರ ವರದಿ ನ್ಯಾಷನಲ್ ಲಾ ಸ್ಕೂಲ್ ಆಫ್ ಯೂನಿವರ್ಸಿಟಿ, ಬೆಂಗಳೂರುರವರ ಅಧ್ಯಯನ ಶಿಫಾರಸ್ಸಿನನ್ವಯ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ) ನಗರ ಪ್ರದೇಶದಲ್ಲಿ ಹಿಂದೆ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಿರುವಂತಹ ಸಂದಂರ್ಭದಲ್ಲಿ ಘನತ್ಯಾಜ್ಯ ನಿರ್ವಹಣೆಗೆ ತಕ್ಕಂತೆ ಕಾರ್ಮಿಕರನ್ನು ನೇಮಿಸಲಾಗಿರುತ್ತದೆ. ಆದರೆ ಪ್ರಸ್ತುತ ನೇರಪಾವತಿ/ನೇರ ನೇಮಕಾತಿ ಮಾಡುವ ಸಂದರ್ಭದಲ್ಲಿ ಹಲವು ನಗರ, ಮಹಾನಗರ ಪಾಲಿಕೆಗಳಲ್ಲಿ ಕಾರ್ಮಿಕರು ಹೆಚ್ಚುವರಿಯಾಗಿರುತ್ತಾರೆ. ಅಲ್ಲದೆ ಹಲವು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಮಿಕರಿಲ್ಲದೆ ಹಾಲಿ ಕಾರ್ಯ ನಿರ್ವಹಿಸಿರುವಂತಹ ಕಾರ್ಮಿಕರ ಮೇಲೆ ಕೆಲಸದ ಒತ್ತಡ ಹೆಚ್ಚಾಗಿರುತ್ತದೆಂದು ಭೇಟಿ ನೀಡಿದ ಸಂದರ್ಭದಲ್ಲಿ ಸ್ವತಃ ಕಾರ್ಮಿಕರೇ ಹೇಳಿಕೆ ನೀಡಿರುತ್ತಾರೆ. ನಗರ ಪ್ರದೇಶದಲ್ಲಿ 500 ಜನರಿಗೆ ಒಬ್ಬ ಪೌರಕಾರ್ಮಿಕರಂತೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ 1000 ಜನರಿಗೆ ಒಬ್ಬ ಪೌರ ಕಾರ್ಮಿಕರಂತೆ ನೇಮಿಸಿಕೊಳ್ಳುವುದು.
6. ಪೌರಕಾರ್ಮಿಕರು ಪ್ರತಿನಿತ್ಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಖಾಯಂ, ನೇರಪಾವತಿ ಮತ್ತು ಗುತ್ತಿಗೆ ಪೌರ ಕಾರ್ಮಿಕರು ಒಂದೇ ರೀತಿಯಾದ ಕೆಲಸವನ್ನು ನಿರ್ವಹಿಸುತ್ತಿದ್ದು ಆದರೆ ಖಾಯಂ ಪೌರಕಾರ್ಮಿಕರು ಮೃತಪಟ್ಟಲ್ಲಿ ಅವರ ಮಕ್ಕಳಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕಲ್ಪಿಸಲಾಗುತ್ತಿದೆ. ಬಿಬಿಎಂಪಿಯಲ್ಲಿ ನೇರಪಾವತಿಯಲ್ಲಿರುವ ಕಾರ್ಮಿಕರು ಮೃತಪಟ್ಟಲ್ಲಿ ಅವರ ಕುಟುಂಬಕ್ಕೆ ರೂ.10.00ಲಕ್ಷ ಪರಿಹಾರ ಅಥವಾ ಅವರ ಮಕ್ಕಳಿಗೆ ನೇರಪಾವತಿಯಡಿ ನೇಮಕಾತಿಗೊಳಿಸಲು ಸರ್ಕಾರದಿಂದ ಸುತ್ತೋಲೆ ಹೊರಡಿಸಿರುತ್ತದೆ. ಅದರಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೇರಪಾವತಿ ಪೌರಕಾರ್ಮಿಕರಿಗೂ ಸಹ ಬಿಬಿಎಂಪಿ ಮಾದರಿ ಅನ್ವಯ ಸರ್ಕಾರದಿಂದ ಆದೇಶ ಹೊರಡಿಸುವುದು.
7. ಪೌರಕಾರ್ಮಿಕರು ಪ್ರತಿನಿತ್ಯ ಬೆಳಗ್ಗೆ 5 ಗಂಟೆಗೆ ಕೆಲಸಕ್ಕೆ ಹೊರಡುವುದರಿಂದ ಇವರ ಮಕ್ಕಳ ಲಾಲನೆ-ಪಾಲನೆ ಕೊರತೆಯಿಂದಾಗಿ ಪೌರಕಾರ್ಮಿಕರ ವೃತ್ತಿಯನ್ನೇ ಅವಲಂಭಿಸಿರುತ್ತಾರೆ. ಸಮಾಜದ ಮುಖ್ಯ ವಾಹಿನಿಗೆ ತರಲು ಪೌರಕಾರ್ಮಿಕರ ಮಕ್ಕಳಿಗೆ 1ನೇ ತರಗತಿಯಿಂದ ಉನ್ನತ ಶಿಕ್ಷಣದವರೆಗೂ ಪ್ರತಿಷ್ಠಿತ ಶಾಲೆಗಳಲ್ಲಿ ಉಚಿತ ಶಿಕ್ಷಣವನ್ನು ಕಲ್ಪಿಸುವುದು.
8. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ) ಹಾಗೂ ಗ್ರಾಮೀಣ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಪೌರಕಾರ್ಮಿಕರಿಗೆ ಜಾರಿ ಮಾಡಿರುವ ಗೃಹಭಾಗ್ಯ ಯೋಜನೆಯನ್ನು ನೇರಪಾವತಿ ಮತ್ತು ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೂ ವಿಸ್ತರಿಸುವುದು.

9. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ) ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಗುಣಮಟ್ಟದ ಪೌಷ್ಠಿಕ ಆಹಾರ, ಕುಡಿಯುವ ನೀರು ಒದಗಿಸಲು ರೂ.20/- ರಿಂದ ರೂ.70/- ಗಳವರೆಗೆ ಉಪಾಹಾರ ಭತ್ಯೆಯನ್ನು ಪರಿಷ್ಕರಿಸುವುದು.
10. ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರು ಹಾಗೂ ಲೋಡರ್ಸ್, ಕ್ಲೀನರ್ಸ್‌ಗಳಿಗೆ ಏಕರೀತಿಯ ಸಮವಸ್ತ್ರ ಹಾಗೂ ವೈಜ್ಞಾನಿಕವಾದ ಸುರಕ್ಷತಾ ಪರಿಕರಗಳನ್ನು ಒಳಗೊಂಡಂತೆ ಉತ್ತಮ ಗುಣಮಟ್ಟದ ಕಿಟ್‌ಗಳನ್ನು ವಿತರಣೆ ಮಾಡುವುದು.
11. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ) ಈಗಾಗಲೇ ಆಯವ್ಯಯದಲ್ಲಿ ಮಂಡಿಸಿ ನಿರ್ಣಯಿಸಿರುವಂತೆ ಪೌರಕಾರ್ಮಿಕರಲ್ಲಿ ಒಬ್ಬ ಪೌರಕಾರ್ಮಿಕರನ್ನು ನಾಮನಿರ್ದೇಶನ ಸದಸ್ಯರನ್ನಾಗಿ ನೇಮಿಸುವುದು.
12. ರಾಜ್ಯದಲ್ಲಿ ಒಳಚರಂಡಿ, ಸೆಪ್ಟಿಕ್‌ಟ್ಯಾಂಕ್‌ಗಳ ಸ್ವಚ್ಛತೆಯಲ್ಲಿ ಉಸಿರುಗಟ್ಟಿ ಮೃತಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕುಟುಂಬಗಳಿಗೆ ಉದ್ಯೋಗ ಹಾಗೂ ಸಮಗ್ರ ಪುನರ್ವಸತಿ ಕಲ್ಪಿಸುವುದು.

## ದಿನಾಂಕ: 19.05.2021ರಂದು ಶ್ರೀ.ಎಂ.ಶಿವಣ್ಣ (ಕೋಟೆ), ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮೈಸೂರು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಸಭೆ.

***

**ಸಭಾಧ್ಯಕ್ಷರ ನಿರ್ದೇಶನಗಳು:**

1. ಪೌರಕಾರ್ಮಿಕರ ಹಾಗೂ ಸ್ವಚ್ಛತಾ ಕೆಲಸಗಾರರು ಪ್ರತಿನಿತ್ಯ ಥರ್ಮಲ್ ಸ್ಕ್ರೀನಿಂಗ್‌ಗೆ ಒಳಪಡಬೇಕು ಮತ್ತು ಕಡ್ಡಾಯವಾಗಿ ಸ್ಯಾನಿಟೈಸರ್ ಬಳಕೆ ಮಾಡುವಂತೆ ಆರೋಗ್ಯ ನಿರೀಕ್ಷಕರು ಎಚ್ಚರಿಕೆ ವಹಿಸುವುದು.
2. ಪೌರಕಾರ್ಮಿಕರು ಹಾಗೂ ಇತರೆ ಸ್ವಚ್ಛತಾ ಸಿಬ್ಬಂದಿಗೆ ಕೆಲಸದ ಸ್ಥಳಕ್ಕೆ ಸಾರಿಗೆ ಸೌಲಭ್ಯಗಳನ್ನು ಕಲ್ಪಿಸುವುದು.
3. ಕ್ವಾರಂಟೈನ್, ಐಸೋಲೇಷನ್ ಮನೆಗಳಿಂದ ತ್ಯಾಜ್ಯ ಸಂಗ್ರಹಣೆ ಮಾಡಲು ನಿಯೋಜಿಸಲ್ಪಟ್ಟಿರುವ ಪೌರಕಾರ್ಮಿಕರು ಹಾಗೂ ಇತರೆ ಸ್ವಚ್ಛತಾ ಸಿಬ್ಬಂದಿಗೆ ಸೂಕ್ತ ಸುರಕ್ಷತಾ ಧರಿಸುಗಳನ್ನು ಒದಗಿಸುವುದು.
4. ಕೋವಿಡ್ ತ್ಯಾಜ್ಯ ಸಂಗ್ರಹಣೆ ನಂತರ ವೈಯಕ್ತಿಕ ಸ್ವಚ್ಛತೆಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದು. ಸ್ವಚ್ಛತಾ ಸಿಬ್ಬಂದಿಗೆ ತಾವು ನಿರ್ವಹಿಸುತ್ತಿರುವ ಕೆಲಸದ ಮಹತ್ವ ಮತ್ತು ಮುನ್ನೆಚ್ಚರಿಕೆ ಮತ್ತು ಕೋವಿಡ್ ತ್ಯಾಜ್ಯ ಸಂಗ್ರಹಿಸಲು ಪ್ರಮಾಣಿಕ ಕಾರ್ಯಾಚರಣೆ ವಿಧಾನದ ಬಗ್ಗೆ ಅರಿವು ಮತ್ತು ನಿರ್ದೇಶನಗಳನ್ನು ನೀಡಬೇಕು.
5. ಕಂಟೈನ್‌ಮೆಂಟ್ ಜೋನ್‌ಗಳಲ್ಲಿ ಹಾಗೂ ಕ್ವಾರಂಟೈನ್ ಮನೆಗಳಿಂದ ತ್ಯಾಜ್ಯ ನಿರ್ವಹಣೆ ಮಾಡುವ ವೇಳೆ ಪೌರಕಾರ್ಮಿಕರಿಗೆ ಸೋಂಕು ತಗಲದಂತೆ ಪಿಪಿಇ ಕಿಟ್‌ಗಳನ್ನು ಕಡ್ಡಾಯವಾಗಿ ಒದಗಿಸುವುದು.
6. ಕ್ವಾರಂಟೈನ್/ಐಸೋಲೇಷನ್ ಮನೆಗಳಿಂದ ತ್ಯಾಜ್ಯ ಸಂಗ್ರಹಿಸಲು ಬಳಸಲ್ಪಡುವ ವಾಹನಗಳನ್ನು ಪ್ರತಿನಿತ್ಯ ಹೈಪೋಕ್ಲೋರೈಡ್ ಸಲ್ಯೂಷನ್ ಬಳಸಿ ಸ್ವಚ್ಛಗೊಳಿಸುವುದು.
7. ಪೌರಕಾರ್ಮಿಕರು ಮತ್ತು ಇತರೆ ಸ್ವಚ್ಛತಾ ಸಿಬ್ಬಂದಿಗಳಿಗೆ ಕೋವಿಡ್-19 ಲಸಿಕೆಯನ್ನು ತೆಗೆದುಕೊಳ್ಳುವಂತೆ ಪ್ರೇರೇಪಿಸಿ ಶೇಖಡ 100 ಪ್ರತಿಶತ ಕೋವಿಡ್ ಲಸಿಕಾಕರಣ (2 ಡೋಸ್‌ಗಳ) ಗುರಿಯನ್ನು ಸಾಧಿಸುವುದು.
8. 15 ದಿನಗಳಿಗೊಮ್ಮೆ ಪೌರಕಾರ್ಮಿಕರಿಗೆ ಹಾಗೂ ಇನ್ನಿತರೆ ಸ್ವಚ್ಛತಾ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಮಾಡಬೇಕು ಮತ್ತು ಜ್ವರ ಹಾಗೂ ಇನ್ನಿತರೆ ಅನಾರೋಗ್ಯ ಲಕ್ಷಣಗಳು ಕಾಣಿಸಿದ ತಕ್ಷಣವೇ ಸದರಿಯವರಿಗೆ ಕೋವಿಡ್ ಪರೀಕ್ಷೆ ಮಾಡಿಸಲು ಅಗತ್ಯ ಕ್ರಮಕೈಗೊಳ್ಳುವುದು.

9. ತಪಾಸಣೆಯಲ್ಲಿ ಕೋವಿಡ್ ಸೋಂಕು ದೃಢಪಟ್ಟಲ್ಲಿ ಅಂತಹ ಪೌರಕಾರ್ಮಿಕರನ್ನು ಹೋಂ ಐಸೋಲೇಷನ್ ಪ್ರಕ್ರಿಯೆಗೆ ಒಳಪಡಿಸುವುದು ಅಥವಾ ಕೋವಿಡ್ ಕೇರ್ ಕೇಂದ್ರಗಳಿಗೆ ದಾಖಲಿಸುವುದು.
10. ಕೋವಿಡ್ ಸೋಂಕಿತ ಸಿಬ್ಬಂದಿಗಳಿಗೆ ಆರೋಗ್ಯ ಸೇವೆಗಳ ಮತ್ತು ಸಾಂಸ್ಥಿಕ ಚಿಕಿತ್ಸೆ ದೊರೆಯುತ್ತಿರುವ ಬಗ್ಗೆ ಎಲ್ಲಾ ವಲಯ ಜಂಟಿ ಆಯುಕ್ತರು, ನಗರದ ಸ್ಥಳೀಯ ಸಂಸ್ಥೆಯ ಮುಖ್ಯಸ್ಥರು ಹಾಗೂ ನಗರಾಭಿವೃದ್ಧಿ ಕೋಶಗಳು ನಿಗಾವಹಿಸುವುದು.
11. ಕರ್ತವ್ಯ ನಿರತ ಪೌರಕಾರ್ಮಿಕರು ಅಥವಾ ಇತರೆ ಸ್ವಚ್ಛತಾ ಕೆಲಸಗಾರರಿಗೆ ಅನಾರೋಗ್ಯ ಉಂಟಾದಲ್ಲಿ ವೇತನಸಹಿತ ರಜೆಯನ್ನು ಜಿಲ್ಲಾಧಿಕಾರಿಗಳು ನೀಡುವುದು.
12. ಮಹಾನಗರ ಪಾಲಿಕೆಯಲ್ಲಿ 50 ವರ್ಷಗಳಿಗಿಂತ ಮೇಲ್ಪಟ್ಟ ಪೌರಕಾರ್ಮಿಕರು ಹಾಗೂ ಇತರೆ ಸ್ವಚ್ಛತಾ ಕೆಲಸಗಾರರಿಗೆ ಕೋವಿಡ್-19 ಲಕ್ಷಣಗಳು ಕಾಣಿಸಿಕೊಂಡಲ್ಲಿ ಹಾಗೂ ಅಸ್ವಸ್ಥರಾಗಿರುವ ಪೌರಕಾರ್ಮಿಕರಿಗೆ ಮೊದಲ ಆದ್ಯತೆ ನೀಡಿ ತಕ್ಷಣವೇ ತಪಾಸಣೆ ಕೈಗೊಳ್ಳುವುದು.
13. ಪೌರಕಾರ್ಮಿಕರ ಕುಟುಂಬದ ಸದಸ್ಯರು ಜ್ವರ, ಶೀತ ಮುಂತಾದವುಗಳಿಂದ ಪೀಡಿತರಾಗಿದ್ದಲ್ಲಿ ಅಂತಹವರನ್ನು ಕೂಡಲೇ ಸಮೀಪದ ಆಸ್ಪತ್ರೆಗೆ ಕಳುಹಿಸಿ ಅಗತ್ಯ ತಪಾಸಣೆಗೆ ಒಳಪಡಿಸುವುದು.
14. ಎಲ್ಲಾ ಮಸ್ಟ್ರಿಂಟ್ ಪಾಯಿಂಟ್/ವಾರ್ಡ್‌ಗಳಲ್ಲಿ ಔಷಧಿ ಸಿಂಪಡಣಾ ಕೇಂದ್ರಗಳನ್ನು ಸ್ಥಾಪಿಸಿ, ಕೆಲಸಕ್ಕೆ ಹಾಜರಾಗುವ ಮತ್ತು ಕೆಲಸ ಮುಗಿಸಿ ಮನೆಗೆ ಹೊರಡುವ ಸಂದರ್ಭದಲ್ಲಿ ಪೌರಕಾರ್ಮಿಕರಿಗೆ ಕಡ್ಡಾಯವಾಗಿ ಔಷಧಿಯನ್ನು ಸಿಂಪಡಿಸಿ ಕಳುಹಿಸುವುದು.

## ದಿನಾಂಕ:31.05.2021 ರಂದು ಶ್ರೀ.ಎಂ.ಶಿವಣ್ಣ(ಕೋಟೆ), ಮಾನ್ಯ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ಮಂಡ್ಯ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೋವಿಡ್ ಮುನ್ನೆಚ್ಚರಿಕೆಯ ಬಗ್ಗೆ ಕೈಗೊಂಡಿರುವ ಕ್ರಮಗಳ ಸಭೆ.

***

**ಸಭಾಧ್ಯಕ್ಷರ ನಿರ್ದೇಶನಗಳು:-**

1. ದಿನಾಂಕ: 19.05.2021ರಂದು ಮೈಸೂರು ಜಿಲ್ಲಾಪಂಚಾಯಿತಿಯಲ್ಲಿ ನಡೆದ ಸಭೆಯಲ್ಲಿ ನೀಡಿರುವ ನಿರ್ದೇಶನದ ಜೊತೆಗೆ ಈ ಕೆಳಕಂಡ ಅಂಶಗಳನ್ನು ಪಾಲಿಸತಕ್ಕದ್ದು.
2. ಪೌರಕಾರ್ಮಿಕರು ಪ್ರತಿನಿತ್ಯ ಥರ್ಮಲ್ ಸ್ಕ್ರೀನಿಂಗ್‌ಗೆ ಒಳಪಟ್ಟು ಕಡ್ಡಾಯವಾಗಿ ಸ್ಯಾನಿಟೈಸರ್ ಬಳಕೆ ಮಾಡುವಂತೆ ಆರೋಗ್ಯ ನಿರೀಕ್ಷಕರು ಎಚ್ಚರಿಕೆ ವಹಿಸುವುದು.
3. ಪೌರಕಾರ್ಮಿಕರು ಕೆಲಸದ ಸ್ಥಳಕ್ಕೆ ಸೂಕ್ತ ಸಾರಿಗೆ ಸೌಲಭ್ಯಗಳನ್ನು ಕಲ್ಪಿಸುವುದು.
4. ಪೌರಕಾರ್ಮಿಕರು, ಯುಜಿಡಿ ಕಾರ್ಮಿಕರು ಮಾಸ್ಕ್, ಗ್ಲೌಸ್, ಗಂಬೂಟ್, ಸ್ಯಾನಿಟೈಸರ್, ಯೂನಿಫಾರ್ಮ್, ಕೋಟ್, ಕನಿಷ್ಠ ಸೌಲಭ್ಯಗಳನ್ನು ಒಳಗೊಂಡಂತೆ ಕೆಲಸ ನಿರ್ವಹಿಸುತ್ತಿರುವುದನ್ನು ನಗರಸಭೆಯ ಆರೋಗ್ಯ ನಿರೀಕ್ಷಕರು, ಪರಿಸರ ಅಭಿಯಂತರರು, ಸಹಾಯಕ ಅಭಿಯಂತರರು (ಪರಿಸರ) ಯುಜಿಡಿ ವ್ಯವಸ್ಥೆಗೆ ಸಂಬಂಧಿಸಿದ ಅಧಿಕಾರಿಗಳು ಖಾತರಿಪಡಿಸಿಕೊಳ್ಳುವುದು.
5. ಪೌರಕಾರ್ಮಿಕರಿಗೆ ಮಸ್ಟ್ರಿಂಗ್, ಡೀ-ಮಸ್ಟ್ರಿಂಗ್ ಜಾಗಗಳಲ್ಲಿ ಕುಡಿಯಲು ಬಿಸಿನೀರಿನ ವ್ಯವಸ್ಥೆ ಮಾಡುವುದು.
6. ಪೌರಕಾರ್ಮಿಕರಿಗೆ ಹಾಗೂ ಇನ್ನಿತರೆ ಸ್ವಚ್ಛತಾ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಮಾಡಬೇಕು.
7. ಕೋವಿಡ್ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಪೌರಕಾರ್ಮಿಕರ ಕೆಲಸದ ಸಮಯವನ್ನು ಕಡಿತಗೊಳಿಸುವುದು.
8. ಪೌರಕಾರ್ಮಿಕರು ಸೋಂಕಿಗೆ ಒಳಗಾಗುತ್ತಿರುವುದರಿಂದ ಕಡ್ಡಾಯವಾಗಿ 20 ಬೆಡ್‌ಗಳನ್ನು ಕಾಯ್ದಿರಿಸಲು ಕ್ರಮವಹಿಸುವುದು.

## ದಿನಾಂಕ:08.06.2021 ರಂದು ಶ್ರೀ.ಎಂ.ಶಿವಣ್ಣ (ಕೋಟೆ),ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ತಲಕಾಡು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಒಳಚರಂಡಿಯನ್ನು ಸುರಕ್ಷತಾ ಪರಿಕರಗಳನ್ನು ತೊಡದೇ ಬರಿಗೈಯಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸಿರುವ ಬಗ್ಗೆ ಸಭೆ.

***

**ಸಭಾಧ್ಯಕ್ಷರ ನಿರ್ದೇಶನಗಳು:-**

1. ಶ್ರೀ ಮಲ್ಲೇಶ್ ಬಿನ್ ಪಳನಿಸ್ವಾಮಿಯವರು ಒಳಚರಂಡಿಯನ್ನು ಯಾವುದೇ ಸುರಕ್ಷತಾ ಪರಿಕರಗಳಿಲ್ಲದೆ ಯಾರ ಅನುಮತಿಯನ್ನು ಪಡೆಯದೇ ಸ್ವಚ್ಛಗೊಳಿಸಿರುವುದಾಗಿ ಹೇಳಿಕೆ ನೀಡಿರುತ್ತಾರೆ.
2. ಮಲ್ಲೇಶ್‌ರವರು ಒತ್ತಡಕ್ಕೆ ಒಳಗಾಗಿ ಯಾವುದೇ ಮಾಹಿತಿಯನ್ನು ನೀಡದೆ ನಾನೇ ಮಾಡಿರುವುದಾಗಿ ಹೇಳುತ್ತಿರುವ ಹೇಳಿಕೆಯು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.
3. ಎಂ.ಎಸ್ ಕಾಯ್ದೆ 2013ರ ಸೆಕ್ಷನ್-7ರ ಪ್ರಕಾರ ಒಳಚರಂಡಿಯನ್ನು ಸುರಕ್ಷತಾ ಪರಿಕರಗಳಿಲ್ಲದೆ ಸ್ವಚ್ಛಗೊಳಿಸುವುದು ಅಪರಾದವಾಗಿರುವುದರಿಂದ ಡಿವೈಎಸ್‌ಪಿ ನೇತೃತ್ವದಲ್ಲಿ ಉಪವಿಭಾಗಾಧಿಕಾರಿ/ ಕಾರ್ಯನಿರ್ವಾಹಕ ಅಧಿಕಾರಿ/ತಹಶೀಲ್ದಾರ್/ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳನ್ನು ಒಳಗೊಂಡಂತೆ ತಂಡವೊಂದನ್ನು ರಚಿಸಿ ತನಿಖೆ ನಡೆಸಿ ಕಾನೂನುರೀತ್ಯಾ ಕ್ರಮಕೈಗೊಳ್ಳುವುದು.

## ದಿನಾಂಕ:23.06.2021ರಂದು ಶ್ರೀ.ಎಂ.ಶಿವಣ್ಣ(ಕೋಟೆ),ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಧಾರವಾಡ ಜಿಲ್ಲೆಯಲ್ಲಿ ನಡೆದ ಸಭೆ

***

**ಪ್ರಮುಖ ನ್ಯೂನ್ಯತೆಗಳು:**

1. ಅನುಕಂಪದ ಆಧಾರದ ಮೇಲೆ ನೇಮಕಾತಿ ಕಲ್ಪಿಸಿರುವುದಿಲ್ಲ.
2. ನೇರನೇಮಕಾತಿ ಹಾಗೂ ನೇರಪಾವತಿಯನ್ನು ಪೂರ್ಣಗೊಳಸುವುದು.
3. ಸುರಕ್ಷತಾ ಪರಿಕರಗಳ ಬಗ್ಗೆ ಅರಿವು ಮೂಡಿಸುವುದು.
4. ಸ್ವಚ್ಛತಾ ಕಾರ್ಮಿಕರಿಗೆ ಇನ್ಸ್ಯೂರೆನ್ಸ್ ಮಾಡಿಸುವುದು.
5. ವಿಶ್ರಾಂತಿ ಕೊಠಡಿಗಳನ್ನು ನಿರ್ಮಾಣ ಮಾಡದೇ ಇರುವುದು.
6. ಗ್ರಾಮಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ವೇತನ ನೀಡದಿರುವ ಬಗ್ಗೆ.

**ಸಭಾಧ್ಯಕ್ಷರ ನಿರ್ದೇಶನಗಳು:**

1. ಮಹಾನಗರ ಪಾಲಿಕಾ ವ್ಯಾಪ್ತಿಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಗೊಳ್ಳದೆ ಬಾಕಿ ಇರುವ ಪ್ರಕರಣಗಳನ್ನು ತುರ್ತಾಗಿ ನೇಮಕಾತಿಗೊಳಸುವುದು.
2. ನೇರನೇಮಕಾತಿ ಹಾಗೂ ನೇರಪಾವತಿ ಪ್ರಕ್ರಿಯೆಯನ್ನು ತುರ್ತಾಗಿ ಪೂರ್ಣಗೊಳಸುವುದು.
3. ಸುರಕ್ಷತಾ ಪರಿಕರಗಳಿಲ್ಲದೆ ಕಾರ್ಯನಿರ್ವಹಿಸಲು ಕಾರಣರಾಗಿರುವ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಎಂ.ಎಸ್ ಕಾಯ್ದೆ 2013ರಂತೆ ಸೂಕ್ತ ಕ್ರಮಕೈಗೊಳ್ಳುವುದು. ಸುರಕ್ಷತಾ ಪರಿಕರಗಳನ್ನು ಧರಿಸದೆ ಕಾರ್ಯನಿರ್ವಹಿಸಿದ್ದಲ್ಲಿ ಆಗುವ ದುಷ್ಪರಿಣಾಮಗಳ ಬಗ್ಗೆ ಕಾರ್ಮಿಕರಿಗೆ ಅರಿವು ಮೂಡಿಸುವುದು.
4. ಪೌರಾಡಳಿತ ಇಲಾಖೆ ಆದೇಶದನ್ವಯ ಎಲ್ಲಾ ಪೌರಕಾರ್ಮಿಕರಿಗೂ ಕಡ್ಡಾಯವಾಗಿ ಇನ್ಸ್ಯೂರೆನ್ಸ್ ಮಾಡಿಸುವುದು.
5. ಪಾಲಿಕೆ ಮತ್ತು ಇತರೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅತೀ ಹೆಚ್ಚು ಮಹಿಳಾ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವುದರಿಂದ ಕಡ್ಡಾಯವಾಗಿ 3 ತಿಂಗಳ ಒಳಗಾಗಿ ವಿಶ್ರಾಂತಿ ಕೊಠಡಿಗಳನ್ನು ನಿರ್ಮಾಣ ಮಾಡುವುದು.
6. ಧಾರವಾಡ ಜಿಲ್ಲಾ ವ್ಯಾಪ್ತಿಯಲ್ಲಿ 144 ಗ್ರಾಮಪಂಚಾಯತಿಗಳಲ್ಲಿ 98 ಜನ ಪೌರಕಾರ್ಮಿಕರಿದ್ದು, ಬಾಕಿ ಉಳಿದಿರುವ ಕನಿಷ್ಠ ವೇತನ ಪಾವತಿ ಮಾಡುವುದು.

## ದಿನಾಂಕ:24.06.2021ರಂದು ಶ್ರೀ.ಎಂ.ಶಿವಣ್ಣ(ಕೋಟೆ),ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ದಾವಣಗೆರೆಯಲ್ಲಿ ನಡೆದ ಸಭೆ.

***

**ಪ್ರಮುಖ ನ್ಯೂನ್ಯತೆಗಳು:**

1. ಕಾರ್ಮಿಕರಿಗೆ ಇ.ಎಸ್.ಐ ಮತ್ತು ಪಿ.ಎಫ್ ಪಾವತಿಯಾಗದಿರುವ ಬಗ್ಗೆ.
2. ಅನೈರ್ಮಲ್ಯ ಶೌಚಾಲಯಗಳು ಜೀವಂತವಾಗಿರುವ ಬಗ್ಗೆ.
3. ಆರೋಗ್ಯ ತಪಾಸಣೆ ಮಾಡಿಸದೆ ಇರುವುದು.
4. ಸುರಕ್ಷತಾ ಪರಿಕರಗಳನ್ನು ನೀಡದೇ ಇರುವುದು.
5. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಗುರುತಿನ ಚೀಟಿ ವಿತರಿಸದೇ ಇರುವುದು.
6. ಕೌಶಲ್ಯಾಭಿವೃದ್ಧಿ ಅಡಿಯಲ್ಲಿ ಬೇಡಿಕೆಗೆ ಅನುಗುಣವಾಗಿ ತರಭೇತಿ ನೀಡದೆ ಇರುವುದು.
7. ಮ್ಯಾನುಯಲ್ ಸ್ಕ್ಯಾವೆಂಜರ್ ಮಕ್ಕಳಿಗೆ/ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಾಲೆಯಲ್ಲಿ ದಾಖಲಾತಿ ನೀಡದೇ ಇರುವ ಬಗ್ಗೆ
8. ಪೌರಕಾರ್ಮಿಕರಿಗೆ ಸೌಲಭ್ಯಗಳನ್ನು ನೀಡದೆ ಹಾಗೂ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಪುರ್ನವಸತಿ ಕಲ್ಪಿಸದೇ ಇರುವುದು.

**ಸಭಾಧ್ಯಕ್ಷರ ನಿರ್ದೇಶನಗಳು:-**

1. ಜಿಲ್ಲಾ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳ ಅಡಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆ ಪಿ.ಎಫ್, ಇ.ಎಸ್.ಐ ಅಧಿಕಾರಿಗಳು, ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶರವರು ಮಹಾನಗರ ಪಾಲಿಕೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ 2013ರಿಂದ 2017ರವರೆಗೆ ಕಾರ್ಮಿಕರಿಗೆ ಪಿ.ಎಫ್, ಇ.ಎಸ್.ಐ ಪಾವತಿ ಮಾಡುವುದು.
2. ಅಸ್ತಿತ್ವದಲ್ಲಿರುವ ಅನೈರ್ಮಲ್ಯ ಶೌಚಾಲಯಗಳನ್ನು ನೈರ್ಮಲ್ಯ ಶೌಚಾಲಯಗಳಾಗಿ ಪರಿವರ್ತಿಸುವುದು.
3. ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಮಾಸ್ಟರ್ ಹೆಲ್ತ್ ಚೆಕ್‌ಅಪ್ ಮಾಡಿಸಿ, ಮಾರಣಾಂತಿಕ ಖಾಯಿಲೆಗಳು ಕಂಡುಬಂದಲ್ಲಿ ಸೂಕ್ತ ಚಿಕಿತ್ಸೆ ಕೊಡಿಸುವುದು.
4. ಪೌರಕಾರ್ಮಿಕರಿಗೆ ಕಡ್ಡಾಯವಾಗಿ ಸುರಕ್ಷತಾ ಪರಿಕರಗಳನ್ನು ವಿತರಿಸುವುದು.

5. ಗುರುತಿಸಿರುವ ಎಲ್ಲಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಗುರುತಿನ ಚೀಟಿಯನ್ನು ವಿತರಿಸುವುದು.
6. ಮ್ಯಾನುಯಲ್ ಸ್ಕ್ಯಾವೆಂಜರ್‌ಗಳಿಗೆ ಬೇಡಿಕೆ ಅನುಗುಣವಾಗಿ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದು.
7. ಮ್ಯಾನುಯಲ್ ಸ್ಕ್ಯಾವೆಂಜರ್ ಮಕ್ಕಳಿಗೆ/ವಿದ್ಯಾರ್ಥಿಗಳಿಗೆ ಕಾಯ್ದೆಯನ್ವಯ ಪ್ರತಿಷ್ಠಿತ ಶಾಲೆಗಳಲ್ಲಿ ದಾಖಲಿಸುವುದು.
8. ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಕಾರ್ಮಿಕರಿಗೆ ರೂ12/-, ರೂ.330/-, ರೂ.500/, ರೂ.1000/-ಗಳ ವಿಮೆಯನ್ನು ಕಡ್ಡಾಯವಾಗಿ ಮಾಡಿಸುವುದು.
9. ಸಫಾಯಿ ಕರ್ಮಚಾರಿಗಳು ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಪುನರ್ವಸತಿ ಕಲ್ಪಿಸುವುದು.
10. ಜಿಲ್ಲಾಮಟ್ಟದಲ್ಲಿ ಮತ್ತು ಉಪವಿಭಾಗ ಮಟ್ಟದಲ್ಲಿ ಪ್ರತಿ 3 ತಿಂಗಳಿಗೊಮ್ಮೆ ಸಭೆಗಳನ್ನು ನಡೆಸಲು ಹಾಗೂ ಹಿಂದಿನ ಸಭೆಯಲ್ಲಿ ಸೂಚಿಸಿದ ರೀತ್ಯಾ ಕೈಗೊಂಡಿರುವ ಪ್ರಗತಿ ಕ್ರಮದ ಮಾಹಿತಿ ನೀಡುವುದು.

## ದಿನಾಂಕ:07.07.2021ರಂದು ಶ್ರೀ.ಎಂ.ಶಿವಣ್ಣ (ಕೋಟೆ), ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಬಳ್ಳಾರಿಯಲ್ಲಿ ಪ್ರಗತಿ ಪರಿಶೀಲನಾ ಸಭೆಯ ಸಭೆ

***

**ಪ್ರಮುಖ ನ್ಯೂನ್ಯತೆಗಳು:**

1. ಪೌರಕಾರ್ಮಿಕರಿಗೆ ವಸತಿ ಸೌಲಭ್ಯವನ್ನು ಒದಗಿಸದೇ ಇರುವುದು.
2. ಕೆ.ಎಸ್.ಆರ್.ಟಿ.ಸಿ, ಕೆ.ಇ.ಬಿ. ಹಾಗೂ ಇತರೆ ಕಡೆಗಳಲ್ಲಿ ಸುರಕ್ಷತಾ ಪರಿಕರಗಳನ್ನು ತೊಡದೇ ಕಾರ್ಯನಿರ್ವಹಿಸದೇ ಇರುವುದು.

**ಸಭಾಧ್ಯಕ್ಷರ ನಿರ್ದೇಶನಗಳು:-**

1. ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರಿಗೂ ಆಶ್ರಯ ಪ್ರಧಾನಮಂತ್ರಿ ಅವಾಸ್ ಯೋಜನೆಯ ಹೌಸಿಂಗ್ ಫಾರ್ ಆಲ್ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ದಿಷ್ಟವಾದ ಸಮಯದಲ್ಲಿ ಪೂರ್ಣಗೊಳಸಿ ವಿತರಿಸುವುದು.
2. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಪೌರಕಾರ್ಮಿಕರಿಗೆ ವಸತಿಗಳನ್ನು ಕಲ್ಪಿಸುತ್ತಿರುವ ಯೋಜನೆಯನ್ನು ನೇರಪಾವತಿಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರಿಗೂ ವಿಸ್ತರಿಸುವುದು.
3. ಕೆಎಸ್ಆರ್‌ಟಿಸಿ, ಕೆಇಬಿ ಇತರೆ ಕಡೆಗಳಲ್ಲೂ ಸಹ ಸುರಕ್ಷತಾ ಪರಿಕರಗಳನ್ನು ಧರಿಸದೇ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ದಂಡ ವಿಧಿಸುವುದು.
4. ಕಾರ್ಮಿಕರಿಗೂ ಮಾಸ್ಟರ್ ಹೆಲ್ತ್ ಚೆಕಪ್ ಮಾಡಿಸಿ, ಮಾರಣಾಂತಿಕ ಖಾಯಿಲೆಗಳು ಬಂದಲ್ಲಿ ಸೂಕ್ತ ಚಿಕಿತ್ಸೆ ಒದಗಿಸುವುದು.
5. ಪೌರಕಾರ್ಮಿಕರ 24.10 (20%) ಅನುದಾನವನ್ನು ಸರ್ಕಾರಿ ಆದೇಶದನ್ವಯ ಉಪಯೋಗಿಸಲು ನಿರ್ದೇಶಿಸಿದರು.
6. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅಸ್ತಿತ್ವದಲ್ಲಿರುವ 567 ಸಂಖ್ಯೆಯ ಅನೈರ್ಮಲ್ಯ ಶೌಚಾಲಯಗಳನ್ನು ನೈರ್ಮಲ್ಯ ಶೌಚಾಲಯಗಳಾಗಿ ಪರಿವರ್ತಿಸುವುದು.
7. ಪೌರಾಡಳಿತ ನಿರ್ದೇಶನಾಲಯದ ನಿರ್ದೇಶನಗಳಂತೆ ಪೌರಕಾರ್ಮಿಕರಿಗೆ ಅನ್ವಯವಾಗುವ ಎಲ್ಲಾ ವಿಮೆಗಳನ್ನು ಮಾಡಿಸುವುದು.

## ದಿನಾಂಕ:23.07.2021ರಂದು ಶ್ರೀ.ಎಂ.ಶಿವಣ್ಣ (ಕೋಟೆ), ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ರಾಯಚೂರು ಜಿಲ್ಲೆಯಲ್ಲಿ ನಡೆದ ಅನೈರ್ಮಲ್ಯ ಶೌಚಾಯಲಗಳ ಬಗ್ಗೆ ಸಭೆ.

***

**ಸಭಾಧ್ಯಕ್ಷರ ನಿರ್ದೇಶನಗಳು:-**

1. ರಾಯಚೂರು ಜಿಲ್ಲಾ ವ್ಯಾಪ್ತಿಯಲ್ಲಿ ತೆರೆದ ಚರಂಡಿಗಳಗೆ ಬಿಡುತ್ತಿರುವ ಶೌಚವನ್ನು ನಿಲ್ಲಿಸಿ ಯುಜಿಡಿ ಅಥವಾ ಪಿಟ್‌ಗುಂಡಿಗಳನ್ನು ನಿರ್ಮಿಸುವುದು.
2. ನಗರಸಭಾ ವ್ಯಾಪ್ತಿಯಿಂದ ನಿರ್ಮಿಸಿರುವ ಸಮುದಾಯ ಶೌಚಾಲಯಗಳನ್ನು ಬಳಕೆ ಮಾಡಲು ಸೂಕ್ತ ಸೌಲಭ್ಯಗಳನ್ನು ಕಲ್ಪಿಸುವುದು.
3. ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಂ.ಎಸ್ ಕಾಯ್ದೆ 2013 ಸೆಕ್ಷನ್-12ರ ಪ್ರಕಾರ ಸ್ವಯಂ ಪ್ರೇರಿತವಾಗಿ ಸಲ್ಲಿಸಿರುವ ಎಲ್ಲಾ ಅರ್ಜಿಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತುರ್ತಾಗಿ ಸಭೆ ನಡೆಸಿ ವಿಲೇ ಮಾಡುವುದು.
4. ಕಾಯ್ದೆಯ ನಿಯಮಗಳಲ್ಲಿ ತಿಳಿಸಿರುವಂತೆ ಸುರಕ್ಷತಾ ಪರಿಕರಗಳನ್ನು ಕಾರ್ಮಿಕರು ಕಡ್ಡಾಯವಾಗಿ ಧರಿಸಿ ಕಾರ್ಯನಿರ್ವಹಿಸುವಂತೆ ಕ್ರಮವಹಿಸುವುದು.
5. ಕಾಯ್ದೆಯನುಸಾರ ಗುತ್ತಿಗೆದಾರರು/ಅಧಿಕಾರಿಗಳು ನಿರ್ಲಕ್ಷ್ಯ ತೋರಿದಲ್ಲಿ ಕಾಯ್ದೆ ಸೆಕ್ಷನ್-7, 8 ಮತ್ತು 9ರ ಪ್ರಕಾರ ಕಡ್ಡಾಯವಾಗಿ ದಂಡ ಮತ್ತು ಶಿಕ್ಷೆಯನ್ನು ನೀಡಲು ಕ್ರಮವಹಿಸುವುದು
6. ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಗೆ ವಿಶೇಷ ತರಭೇತಿಯನ್ನು ನೀಡಿ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮದ ಮೂಲಕ ಪರ್ಯಾಯ ಉದ್ಯೋಗವನ್ನು ನೀಡುವುದು.
7. ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಗೆ ಕಾಯ್ದೆಯನ್ವಯ ಪುನರ್ವಸತಿ ಕಲ್ಪಿಸುವುದು.
8. 3 ತಿಂಗಳಗೊಮ್ಮೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಾಗೃತಿ ಸಮಿತಿ ಸಭೆ ನಡೆಸಿ ಪೌರ ಕಾರ್ಮಿಕರು/ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ನೀಡುವುದು.
9. ಪೌರಕಾರ್ಮಿಕರ ಕುಟುಂಬಕ್ಕೆ ವಿಮೆ ಹಾಗೂ ಇನ್ನಿತರೆ ಸೌಲಭ್ಯಗಳನ್ನು ನೀಡುವುದು.
10. ಮೃತಪಟ್ಟ ಪೌರಕಾರ್ಮಿಕರ ಕುಟುಂಬದ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ಕೆಲಸ ನೀಡುವುದು.
11. ಉತ್ತಮ ಗುಣಮಟ್ಟದ ಸುರಕ್ಷತಾ ಪರಿಕಗಳನ್ನು ಕಡ್ಡಾಯವಾಗಿ ನೀಡಲು ತಕ್ಷಣ ಕ್ರಮ ಕೈಗೊಳ್ಳುವುದು ಹಾಗೂ ಸಮವಸ್ತ್ರಗಳನ್ನು ನೀಡುವುದು.
12. ಪೌರಕಾರ್ಮಿಕರಿಗೆ ಮಸ್ಟ್ರಿಂಗ್ ಪಾಯಿಂಟ್‌ಗಳಲ್ಲಿ ವಿಶ್ರಾಂತಿಗೃಹ (Rest room) ಗಳನ್ನು 6 ತಿಂಗಳ ಒಳಗಾಗಿ ನಿರ್ಮಾಣ ಮಾಡಲು ಕ್ರಮವಹಿಸುವುದು.

## ದಿನಾಂಕ:02.09.2021ರಂದು ಶ್ರೀ.ಎಂ.ಶಿವಣ್ಣ (ಕೋಟೆ), ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಹಾಗೂ ಮ್ಯಾನ್‌ಹೋಲ್‌ನಲ್ಲಿ ಮೃತಪಟ್ಟ ಅವಲಂಬಿತರಿಗೆ ಪುನರ್ವಸತಿ ಕಲ್ಪಿಸಿರುವ ಬಗ್ಗೆ ಸಭೆ.

***

**ಸಭಾಧ್ಯಕ್ಷರ ನಿರ್ದೇಶನಗಳು:-**

1. ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಹಾಗೂ 12 ಜಿಲ್ಲೆಗಳಲ್ಲಿ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ವಿವರಗಳನ್ನು ಎನ್.ಎಸ್.ಕೆ.ಎಫ್.ಡಿ.ಸಿ ವೆಬ್‌ಸೈಟ್‌ನಲ್ಲಿ ದಿ:12.09.2021ರ ಒಳಗಾಗಿ ಅಪ್‌ಲೋಡ್ ಮಾಡುವುದು.
2. ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕುಟುಂಬದ ಅವಲಂಬಿತರಿಗೆ ಕಡ್ಡಾಯವಾಗಿ ಪುನರ್ವಸತಿ ಕಲ್ಪಿಸುವುದು.
3. 1993ರಿಂದ ಇಲ್ಲಿಯವರೆಗೆ ಮ್ಯಾನ್‌ಹೋಲ್/ಸೆಪ್ಟಿಕ್ ಟ್ಯಾಂಕ್/ಒಳಚರಂಡಿ/ ತೆರೆದ ಚರಂಡಿ ಗಳನ್ನು ಸ್ವಚ್ಛಗೊಳಿಸುವಾಗ ಮೃತಪಟ್ಟ ಕಾರ್ಮಿಕರ ಕುಟುಂಬದ ಅವಲಂಬಿತರಿಗೆ ನ್ಯಾಯಾಲಯದ ರಿಟ್ ಪಿಟಿಷನ್ (ಸಿ) ಸಂಖ್ಯೆ:583/2003ರ ತೀರ್ಪಿನನ್ವಯ ದಿ:27.03.2019ರ ಪತ್ರದ ನಮೂನೆ ಯಲ್ಲಿ ಕೋರಿರುವಂತೆ ಪುನರ್ವಸತಿ ಕಲ್ಪಿಸುವುದು.

## ದಿನಾಂಕ:16.12.2021ರಂದು ಕಾರ್ಯದರ್ಶಿ, ಅಧ್ಯಕ್ಷತೆಯಲ್ಲಿ ದಾಂಡೇಲಿ ಜಂಗಲ್ ರೆಸಾರ್ಟ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಫಾಯಿ ಕರ್ಮಚಾರಿಗಳ/ಸ್ವಚ್ಛತಾ ಕೆಲಸಗಾರರ ಕುಂದುಕೊರತೆಗಳ ಬಗ್ಗೆ ನಡೆದ ಸಭೆ

***

**ಪ್ರಮುಖ ನ್ಯೂನ್ಯತೆಗಳು:-**

1. ಸ್ವಚ್ಛತಾ ಕಾರ್ಮಿಕರಿಗೆ ಕನಿಷ್ಠ ವೇತನ ಪಾವತಿ ಮಾಡದೇ ಇರುವುದು.
2. ರಜಾ ಸೌಲಭ್ಯ ಕಲ್ಪಿಸದೇ ಇರುವುದು.
3. ಆರೋಗ್ಯ ತಪಾಸಣೆ ಮಾಡಿಸದೇ ಇರುವುದು.
4. ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸುವುದು.

**ಸಭಾಧ್ಯಕ್ಷರ ನಿರ್ದೇಶನಗಳು:-**

1. ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸ್ವಚ್ಛತಾ ಕೆಲಸಗಾರರು/ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖಾ ಅಧಿಕಾರಿಗಳು ಪರಿಶೀಲಿಸಿ ಕಾಯ್ದೆಯನ್ವಯ ಕನಿಷ್ಟ ವೇತನವನ್ನು ಪಾವತಿಸುವುದು.
2. ರಾಜ್ಯಾದ್ಯಂತ ಖಾಯಂ ಕೆಲಸಗಾರರಿಗೆ ಸಿಗುವ ರಜಾ ಸೌಲಭ್ಯಗಳನ್ನು ಗುತ್ತಿಗೆ/ ನೇರಪಾವತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕೆಲಸಗಾರರು/ ಪೌರಕಾರ್ಮಿಕರಿಗೂ ವಿಸ್ತರಿಸುವುದು.
3. ಕಾರ್ಮಿಕರಿಗೆ ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆ (ಪಿ.ಎಂ.ಎಸ್.ಬಿ.ಐ) ವಿಮಾ ಯೋಜನೆ, ಪ್ರಧಾನ ಮಂತ್ರಿ ಜೀವನ ಜ್ಯೋತಿ ಭೀಮಾ ಯೋಜನೆ (ಪಿ.ಎಂ.ಜೆ.ಜೆ.ಬಿ.ವೈ) ವಿಮಾ ಯೋಜನೆ ಮತ್ತು ಎಸ್.ಬಿ.ಐ ಗ್ರೂಪ್ ಆಕ್ಸಿಡೆಂಟಲ್ ಇನ್ಸ್ಯೂರೆನ್ಸ್ ವಿಮಾ ಯೋಜನೆಗಳನ್ನು ಮಾಡಿಸುವುದು.
4. ಕಾರ್ಮಿಕರಿಗೆ 3 ತಿಂಗಳಿಗೊಮ್ಮೆ ಮಾಸ್ಟರ್ ಆರೋಗ್ಯ ತಪಾಸಣೆ ಮಾಡಿಸುವುದು.

**ದಿನಾಂಕ:11.01.2022ರಂದು ಶ್ರೀ.ಎಂ.ಶಿವಣ್ಣ (ಕೋಟೆ), ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಎಂ.ಎಸ್.ಕಾಯ್ದೆ ಮತ್ತು ನಿಯಮಗಳು-2013ರ ಉಲ್ಲಂಘನೆ ಹಾಗೂ ಮ್ಯಾನ್‌ಹೋಲ್‌ಗಳಲ್ಲಿ ಕಾರ್ಯನಿರ್ವಹಿಸುವಾಗ ಮೃತಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಕಾರ್ಮಿಕರ ಕುಟುಂಬದ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಕುರಿತು ನಡೆದ ವೀಡಿಯೋ ಕಾನ್ಫರೆನ್ಸ್ ಸಭೆ.**

***

**ಪ್ರಮುಖ ನ್ಯೂನ್ಯತೆಗಳು:**

1. ಎಂ.ಎಸ್.ಕಾಯ್ದೆ ಮತ್ತು ನಿಯಮಗಳು 2013ರ ಮತ್ತು ಸರ್ಕಾರದ ಆದೇಶವನ್ನು ಉಲ್ಲಂಘನೆಯಾಗಿರುವ ಪ್ರಕರಣಗಳಲ್ಲಿ ಸೆಕ್ಷನ್-20, 21ರ ಪ್ರಕಾರ ವಿಚಾರಣೆಯನ್ನು ನಡೆಸಿ ಎಲ್ಲಾ ಪ್ರಕರಣಗಳನ್ನು ಮುಕ್ತಾಯಗೊಳಿಸುವುದು.
2. ಹಾಸನದ ಹೊಳೇನರಸೀಪುರದ ಪ್ರಕರಣದಲ್ಲಿ ಡ್ರೈವರ್ ಹಾಗೂ ಕಾರ್ಮಿಕರನ್ನು ಅಮಾನತುಗೊಳಿಸಿರುವುದು ತಿಳಿದು ಬಂದಿರುತ್ತದೆ. ಸುಮಾರು ವರ್ಷಗಳಿಂದ ಮ್ಯಾನ್‌ಹೋಲ್ ಸ್ವಚ್ಛಗೊಳಿಸುತ್ತಿರುವುದಾಗಿ ಕಾರ್ಮಿಕರೇ ಮೌಖಿಕ ಹೇಳಿಕೆಯಲ್ಲಿ ತಿಳಿಸಿರುವುದರಿಂದ ಪ್ರಕರಣವನ್ನು ಕೂಲಂಕಷವಾಗಿ ವಿಚಾರಣೆ ನಡೆಸುವುದು.
3. ಧಾರವಾಡ ಹಾಗೂ ಉತ್ತರಕನ್ನಡ ಜಿಲ್ಲೆಯ ಮಾದರಿಯಂತೆ ಮೃತಪಟ್ಟ ಕುಟುಂಬದ ಅವಲಂಬಿತರಿಗೆ ಖಾಯಂ ನೇಮಕಾತಿಯನ್ನು ಕಲ್ಪಿಸುವುದು.

**ದಿನಾಂಕ:03.03.2022ರಂದು ಶ್ರೀ.ಎಂ.ಶಿವಣ್ಣ (ಕೋಟೆ), ಮಾನ್ಯ ಅಧ್ಯಕ್ಷರು ಅಧ್ಯಕ್ಷತೆಯಲ್ಲಿ ಎಂ.ಎಸ್.ಕಾಯ್ದೆ ಮತ್ತು ನಿಯಮ 2013ರ ಪ್ರಕಾರ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಗುರುತಿನ ಚೀಟಿ ಮತ್ತು ಪುನರ್ವಸತಿ ಕಲ್ಪಿಸುವ ಪರಿಶೀಲನಾ ಸಭೆ.**

***

**ಸಭಾಧ್ಯಕ್ಷರ ನಿರ್ದೇಶನಗಳು:-**

1. ಎಂ.ಎಸ್ 2013 ಕಾಯ್ದೆ ಮತ್ತು ನಿಯಮಗಳ ಪ್ರಕಾರ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಅನುಮೋದಿತ ಅಂತಿಮಪಟ್ಟಿ ಪ್ರಕಟಿಸಿದ ಒಂದು ತಿಂಗಳೊಳಗಾಗಿ ಕುಟುಂಬದ ಎಲ್ಲಾ ಸದಸ್ಯರ ವಿವರಗಳನ್ನು ಒಳಗೊಂಡಂತೆ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ವಿತರಿಸುವುದು.
2. ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಒಂದು ಬಾರಿ ನಗದು (OTCA) ಸೌಲಭ್ಯ ಕಲ್ಪಿಸುವುದು.
3. ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಮಕ್ಕಳಿಗೆ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ವಿದ್ಯಾರ್ಥಿ ವೇತನವನ್ನು ಪಾವತಿಸುವುದು.
4. ಗುರುತಿಸಲ್ಪಟ್ಟ ಎಲ್ಲಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಮಕ್ಕಳಿಗೆ ಕೇಂದ್ರ ಅಥವಾ ರಾಜ್ಯಸರ್ಕಾರದಿಂದ ವಿದ್ಯಾರ್ಥಿ ವೇತನದ ಸೌಲಭ್ಯಗಳನ್ನು ನೀಡುವುದು.
5. ಗುರುತಿಸಿದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಶೇಷ ವಸತಿ ಯೋಜನೆಯನ್ನು ರೂಪಿಸಿ 9 ತಿಂಗಳೊಳಗಾಗಿ ವಸತಿಯನ್ನು ಕಲ್ಪಿಸುವುದು.
6. ನಗರ ಮತ್ತು ಗ್ರಾಮೀಣ ವ್ಯಾಪ್ತಿಯಲ್ಲಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಅವಲಂಬಿತರೊಂದಿಗೆ ಕಾರ್ಯಾಗಾರವನ್ನು ಕೈಗೊಂಡು ಅವಲಂಬಿತರಲ್ಲೊಬ್ಬರಿಗೆ ಕೌಶಲ್ಯ ತರಭೇತಿ ನೀಡುವುದು.
7. ತರಭೇತಿಯ ಆಧಾರದನ್ವಯ ಕೌಶಲ್ಯಕ್ಕೆ ತಕ್ಕಂತೆ ಪರ್ಯಾಯ ಉದ್ಯೋಗವನ್ನು ಪ್ರಾರಂಭಿಸಲು ಸಫಾಯಿ ಅಭಿವೃದ್ಧಿ ನಿಗಮದಿಂದ ಸಾಲಸೌಲಭ್ಯವನ್ನು ವಿತರಿಸುವುದು.
8. ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕುಟುಂಬದವರ ಮಾಹಿತಿಯನ್ನು ಕ್ರೋಢೀಕರಿಸಿ ಕುಟುಂಬದ ಸದಸ್ಯರಿಗೆ ಟೈಲರಿಂಗ್, ಮೊಬೈಲ್ ರಿಪೇರಿ, ಕಂಪ್ಯೂಟರ್ ಟ್ರೈನಿಂಗ್, ಕೌಶಲ್ಯ ತರಬೇತಿಯನ್ನು ನೀಡುವುದು.

**ದಿನಾಂಕ: ೦೫.೦೩.2022ರಂದು ಶ್ರೀ ಎಂ.ಶಿವಣ್ಣ (ಕೋಟೆ) ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ನಡೆದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕುಂದುಕೊರತೆ ಕುರಿತು ಸಭೆ.**

***

**ಸಭಾಧ್ಯಕ್ಷರ ನಿರ್ದೇಶನಗಳು:-**

1. ಮೃತ ಪೌರಕಾರ್ಮಿಕ ನಾರಾಯಣನ ಮಕ್ಕಳು ಅಪ್ರಾಪ್ತ ವಯಸ್ಕರಾಗಿದ್ದು, ಅವರನ್ನು ಪೋಷಿಸುವ ಪ್ರಮಾಣಿಕ ಪೋಷಕರು ನ್ಯಾಯಾಲಯದಿಂದ ಪೋಷಕ ಪ್ರಮಾಣಪತ್ರವನ್ನು ಒದಗಿಸಿ, ಕೆಲಸ ಪಡೆಯುವುದು.
2. ಎಂ.ಎಸ್ ಕಾಯ್ದೆ 2013ರ ಕಾಯ್ದೆಯನ್ವಯ ಶೌಚಾಲಯದ ಮಲ, ಮೂತ್ರಗಳು ಚರಂಡಿಗೆ ಬಿಡುವುದನ್ನು ನಿಷೇಧಿಸಿದ್ದು, ನಗರಸಭೆ ವ್ಯಾಪ್ತಿಯಲ್ಲಿ ಸಂಬಂಧಪಟ್ಟ ಅನುಭೋಗದಾರರಿಗೆ ನೋಟೀಸ್ ನೀಡಿ ದಂಡವನ್ನು ವಿಧಿಸುವುದು.
3. ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ಇನ್‌ಸ್ಯಾನಿಟರಿ ಲೆಟ್ರಿನ್‌ಗಳನ್ನು ನಿರ್ಮೂಲನೆ ಮಾಡುವುದು.
4. ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕಾಯ್ದೆಯನ್ವಯ ಪುನರ್ವಸತಿ ಕಲ್ಪಿಸುವುದು.
5. ಕೆ.ಎಸ್.ಆರ್.ಟಿ.ಸಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರಿಗೆ ಕನಿಷ್ಟ ವೇತನ ಪಾವತಿ ಮಾಡಲು ವಿಭಾಗ ನಿಯಂತ್ರಣಾಧಿಕಾರಿಗಳು ಕ್ರಮಕೈಗೊಳ್ಳುವುದು.

## ದಿನಾಂಕ: 17.03.2022ರಂದು ಶ್ರೀ ಎಂ.ಶಿವಣ್ಣ ಕೋಟೆ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಪೌರಾಕಾರ್ಮಿಕರ ಕುಂದುಕೊರತೆಗಳ ಕುರಿತು ಸಭೆ

**ಸಭೆಯ ತೀರ್ಮಾನಗಳು:**

1. ನಗರ ಸ್ಥಳೀಯ ಸಂಸ್ಥೆ ಮತ್ತು ಮಹಾನಗರ ಪಾಲಿಕೆ ಒಳಗೊಂಡಂತೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ನೇರವಾಗಿ ಮಲಮೂತ್ರಗಳನ್ನು ತೆರೆದ ಚರಂಡಿಗೆ ಬಿಡುತ್ತಿರುವ ಮನೆಗಳನ್ನು ಪಟ್ಟಿ ಮಾಡಿ ಕಾಯ್ದೆಯನುಸಾರ ಕ್ರಮವಹಿಸುವುದು.
2. ಮಲಮೂತ್ರಗಳನ್ನು ತೆರೆದ ಚರಂಡಿಗಳಿಗೆ ಬಿಡುವುದನ್ನು ನಿಲ್ಲಿಸಿ. ಪಿಟ್‌ಗುಂಡಿ ಅಥವಾ ಯು.ಜಿ.ಡಿಗೆ ಬಿಡುವುದು.
3. ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕಾಯ್ದೆ ಪ್ರಕಾರ ಪುನರ್ವಸತಿ ಕಲ್ಪಿಸುವುದು.
4. ದಿ: 25.01.2017ರಂದು ನಡೆದ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮದ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ತಮ್ಮ ಹಂತದಲ್ಲಿ ಸಭೆಯನ್ನು ನಡೆಸಿ ಪರಿಶೀಲಿಸುವುದು.
5. ನೇರ ವೇತನ ಪೌರಕಾರ್ಮಿಕರಿಗೆ ಪಾವತಿಯಾಗುತ್ತಿರುವ ಪಿ.ಎಫ್ ಮತ್ತು ಇ.ಎಸ್.ಐ ಅವರ ಖಾತೆಗೆ ಜಮೆ ಮಾಡುವುದು.
6. ರಾಜ್ಯ ಸರ್ಕಾರವು ರೂಪಿಸಿರುವ ವಿಮೆಗಳನ್ನು ಪೌರ ಕಾರ್ಮಿಕರಿಗೆ ಮಾಡಿಸುವುದು.
7. ಪೌರ ಕಾರ್ಮಿಕರಿಗೆ ವಿಶ್ರಾಂತಿ ಗೃಹಗಳನ್ನು 6 ತಿಂಗಳೊಳಗಾಗಿ ನಿರ್ಮಿಸುವುದು.
8. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಯಂ ಪೌರಕಾರ್ಮಿಕರಿಗೆ ಗೃಹ ಭಾಗ್ಯ ಯೋಜನೆಯಡಿ ಸೂಕ್ತವಾದ ಸ್ಥಳವನ್ನು ಗುರುತಿಸಿ ಅಥವಾ ಹೊಸ ಬಡಾವಣೆ ನಿರ್ಮಾಣ ಸಂದರ್ಭದಲ್ಲಿ ಪ್ರತ್ಯೇಕವಾಗಿ ವಸತಿ ಗೃಹಗಳನ್ನು ನಿರ್ಮಾಣ ಮಾಡುವುದು.
9. ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೆಳಗ್ಗಿನ ಉಪಹಾರವನ್ನು ವಿತರಣೆ ಮಾಡುವುದು.
10. ಗ್ರಾಮ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಬಾಕಿಯಿರುವ ಕನಿಷ್ಟ ವೇತನವನ್ನು ಪಾವತಿ ಮಾಡುವುದು ಮತ್ತು ಸರ್ಕಾರದ ವಿವಿಧ ಯೋಜನೆಗಳಲ್ಲಿ ಗೃಹಭಾಗ್ಯ ಯೋಜನೆಯಡಿ ವಸತಿ ಸೌಲಭ್ಯವನ್ನು ಕಲ್ಪಿಸುವುದು.
11. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಸುರಕ್ಷತಾ ಪರಿಕರಗಳನ್ನು ಕಲ್ಪಿಸುವುದು
12. ಲೋಡರ್ಸ್, ಡ್ರೈವರ್ಸ್, ಕ್ಲೀನರ್‌ಗಳಿಗೆ ಪಿ.ಎಫ್, ಇಎಸ್‌ಐಗಳು ಪಾವತಿಯಾಗುತ್ತಿರುವ ಬಗ್ಗೆ ಕಾರ್ಮಿಕರಿಂದ ಪ್ರತಿಮಾಹೆ ಮಾಹಿತಿ ಪಡೆದು ತದನಂತರ ಗುತ್ತಿಗೆದಾರರಿಗೆ ವೇತನವನ್ನು ನೀಡುವುದು.
13. ಕೆ.ಎಸ್.ಆರ್.ಟಿ.ಸಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರಿಗೆ ಕನಿಷ್ಟ ವೇತನವನ್ನು ವಿಭಾಗ ನಿಯಂತ್ರಣಾಧಿಕಾರಿಗಳು ಪಾವತಿ ಮಾಡುವುದು.

# ದಿನಾಂಕ:29.03.2022ರಂದು ಸನ್ಮಾನ್ಯ ಶ್ರೀ ಶಿವಣ್ಣ ಕೋಟೆ, ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ರಾಮನಗರ ಜಿಲ್ಲಾ ಪಂಚಾಯತ್‌ನಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆ

***

**ಸಭಾಧ್ಯಕ್ಷರ ತೀರ್ಮಾನಗಳು:**

1. ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯ 2013 ರಿಂದ 2017ರವರೆಗೂ ಪೌರ ಕಾರ್ಮಿಕರು ಹೊರಗುತ್ತಿಗೆಯ ಆಧಾರದ ಮೇಲೆ ಕಾರ್ಯನಿರ್ವಹಿಸಿದಂತಹ ಪೌರ ಕಾರ್ಮಿಕರಿಗೆ ಕನಿಷ್ಟ ವೇತನ, ವ್ಯತ್ಯಾಸದ ಮೊತ್ತವನ್ನು ಕಾರ್ಮಿಕರ ಖಾತೆಗೆ ಪಾವತಿ ಮಾಡುವುದು.
2. ನಗರ ಸ್ಥಳೀಯ ಸಂಸ್ಥೆಗಳ ನಗರಸಭೆ, ಪುರಸಭೆ, ವ್ಯಾಪ್ತಿಯಲ್ಲಿ ಸರ್ಕಾರವು ಪಿ.ಎಂ.ಜೆ.ಜೆ.ವೈ ಹಾಗೂ ಗ್ರೂಪ್ ಇನ್ಸ್ಯೂರೆನ್ಸ್ ಮಾಡಿಸುವುದು. ಕಾರ್ಮಿಕರು ಅಕಾಲಿಕವಾಗಿ ಅಥವಾ ಗಾಯಗೊಂಡಲ್ಲಿ 5 ಲಕ್ಷ, ಮೃತಪಟ್ಟಲ್ಲಿ 2 ಲಕ್ಷ ರೂ ಪರಿಹಾರ ನೀಡಲು ಕ್ರಮವಹಿಸುವುದು.
3. ನೇರಪಾವತಿಯಡಿಯಲ್ಲಿ ನೇಮಕಗೊಂಡಿರುವ ಪೌರಕಾರ್ಮಿಕರಿಗೆ ಪಿ.ಎಫ್ ಮತ್ತು ಇ.ಎಸ್.ಐ ಹಣವನ್ನು ಕಾರ್ಮಿಕರ ಖಾತೆಗೆ ನೇರವಾಗಿ ಪಾವತಿಸುವುದು.
4. ನೇರಪಾವತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಮೃತಪಟ್ಟ ಪ್ರಕರಣಗಳಲ್ಲಿ ಸರ್ಕಾರದ ಆದೇಶದನ್ವಯ ಇನ್ಸ್ಯೂರೆನ್ಸ್ ಮೊತ್ತ ಹಾಗೂ ಪಿ.ಎಫ್ ಹಣವನ್ನು ನೀಡುವುದು.
5. ಪೌರಕಾರ್ಮಿಕರಿಗೆ ಮಸ್ಟ್ರಿಂಗ್ ಪಾಯಿಂಟ್‌ಗಳಲ್ಲಿ ಉನ್ನತ ಮಟ್ಟದ ವಿಶ್ರಾಂತಿ ಗೃಹಗಳನ್ನು ನಿರ್ಮಿಸುವುದು.
6. ರೋಸ್ಟರ್ ಪದ್ಧತಿಯಲ್ಲಿ ಬಾಕಿ ಉಳಿದಿರುವ ಹುದ್ದೆಗಳನ್ನು ಭರ್ತಿ ಮಾಡುವುದು.
7. ಪೌರಕಾರ್ಮಿಕರ ಆರೋಗ್ಯ ತಪಾಸಣೆಯನ್ನು ಪ್ರತಿ 3 ತಿಂಗಳಿಗೊಮ್ಮೆ ಮಾಸ್ಟರ್ ಆರೋಗ್ಯ ತಪಾಸಣೆ ಮಾಡಿಸುವುದು.
8. ಖಾಯಂ ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯ ಅಡಿಯಲ್ಲಿ ನಗರಸಭೆಯ ವ್ಯಾಪ್ತಿಯಲ್ಲಿ ಖಾಲಿ ಇರುವ ನಿವೇಶನದಲ್ಲಿ ವಸತಿ ಸೌಲಭ್ಯವನ್ನು ನೀಡುವುದು.





**ರಾಜ್ಯದಲ್ಲಿನ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಹಾಗೂ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾಗಿರುವ ಶಿಫಾರಸ್ಸುಗಳ ಬಗ್ಗೆ ಚರ್ಚೆ.**



**ಸಫಾಯಿ ಕರ್ಮಚಾರಿಗಳ ಹಾಗೂ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಆರ್ಥಿಕ/ಸಾಮಾಜಿಕ/ ಶೈಕ್ಷಣಿಕ ಹಾಗೂ ರಾಜಕೀಯ ಸ್ಥಿತಿಗತಿ ಬಗ್ಗೆ ಚರ್ಚೆ.**



ಬಳ್ಳಾರಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಸಫಾಯಿ ಕರ್ಮಚಾರಿಗಳ ಕುಂದುಕೊರತೆ ಬಗ್ಗೆ ಪರಿಶೀಲನಾ ಸಭೆ.



ರಾಮನಗರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸಫಾಯಿ ಕರ್ಮಚಾರಿ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪ್ರಗತಿ ಪರಿಶೀಲನಾ ಸಭೆ.



ಪೌರಕಾರ್ಮಿಕರ ಕುಂದುಕೊರತೆಗಳ ಬಗ್ಗೆ ಸ್ಥಳ ಪರಿಶೀಲನೆ.



ಮಂಡ್ಯ ಜಿಲ್ಲೆಯಲ್ಲಿ ನಡೆದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕುಂದು ಕೊರತೆ ಕುರಿತು ಸಭೆ



ಶಿವಮೊಗ್ಗ ಜಿಲ್ಲೆ ಭದ್ರಾವತಿಯಲ್ಲಿ ಕೋವಿಡ್ ವಾರಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಪೌರಕಾರ್ಮಿಕ ಮೃತಪಟ್ಟಿದ್ದು ಅವರ ಕುಟುಂಬಕ್ಕೆ ಪರಿಹಾರ ವಿತರಣೆ